ಸಂಪುಟ 01 | ಸಂಚಿಕೆ 124 | ಭಾನುವಾರ 22 ಮಾರ್ಚ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE
ಸತ್ಯದ ದಿಕ್ಕು TRUE PATH
ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING
ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ
RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1) ವಿಶ್ವ ಜಲ ದಿನ**

ಮಾರ್ಚ್ 22 ರಂದು, ಸಿಹಿನೀರಿನ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸಿಹಿನೀರಿನ ಸಂಪನ್ಮೂಲಗಳ ಸುಸ್ಥಿರ ನಿರ್ವಹಣೆಯನ್ನು ಪ್ರತಿಪಾದಿಸಲು ವಾರ್ಷಿಕವಾಗಿ ವಿಶ್ವ ಜಲ ದಿನವನ್ನು ಆಚರಿಸಲಾಗುತ್ತದೆ. 1992 ರಲ್ಲಿ ರಿಯೊ ಡಿ ಜನೇರಿಯೊದಲ್ಲಿ ನಡೆದ ವಿಶ್ವಸಂಸ್ಥೆಯ ಪರಿಸರ ಮತ್ತು ಅಭಿವೃದ್ಧಿ ಸಮ್ಮೇಳನದಲ್ಲಿ (UNCED) ಇದನ್ನು ಆಚರಿಸಲು ಶಿಫಾರಸು ಮಾಡಲಾಯಿತು. ಮತ್ತು ನಂತರ, 1993 ರಲ್ಲಿ ಮೊದಲ ವಿಶ್ವ ಜಲ ದಿನವನ್ನು ಆಚರಿಸಲಾಯಿತು

**2) ಬಿಹಾರ ದಿವಸ್**

ಬಿಹಾರ ರಾಜ್ಯ ರಚನೆಯ ಗುರುತಾಗಿ ಮಾರ್ಚ್ 22 ರಂದು ಬಿಹಾರ ದಿವಸ್ ಅಥವಾ ಬಿಹಾರ ದಿನವನ್ನು ಆಚರಿಸಲಾಗುತ್ತದೆ. ಇದು ರಾಜ್ಯದಲ್ಲಿ ಸಾರ್ವಜನಿಕ ರಜಾದಿನವಾಗಿದೆ. ಈ ದಿನದಂದು, ಬ್ರಿಟಿಷರು 1912 ರಲ್ಲಿ ಬಂಗಾಳದಿಂದ ಬಿಹಾರ ರಾಜ್ಯವನ್ನು ಕೆತ್ತಿದರು.

## ಸುಭಾಷಿತ

ವಿಧೇಯನಾಗಿ ಇರಲು ಕಲಿಯದವನು
ಉತ್ತಮ ನಾಯಕ ಆಗಲು ಸಾಧ್ಯವಿಲ್ಲ.

–ಅರಿಸ್ಟಾಟಲ್




# ಮುಸ್ಲಿಂ ಬಾಂಧವರ ಜೊತೆ ರಂಜಾನ್ ಸಾಮೂಹಿಕ

## ಪ್ರಾರ್ಥನೆಯಲ್ಲಿ ಭಾಗವಹಿಸಿದ ಸಿಎಂ ಸಿದ್ದು





**ಬೆಂಗಳೂರು: ರಾಜ್ಯದ ಮುಸ್ಲಿಂ ಬಾಂಧವ–ರಿಗೆ ರಂಜಾನ್ ಹಬ್ಬದ ಶುಭಕೋರಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮಾನವಕುಲದ ಒಳಿತಿಗೆ ಪ್ರಾರ್ಥಿಸುವುದು ಅತ್ಯಂತ ಅವಶ್ಯ ಎಂದು ತಿಳಿಸಿದರು.**

ಇಂದು ಪವಿತ್ರ ರಂಜಾನ್ ಹಬ್ಬದ ಪ್ರಯುಕ್ತ ಸಾಮೂಹಿಕ ಪ್ರಾಥ–ರ್ನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ರಾಜ್ಯದ ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಹಾರ್ದಿಕ ಶುಭಾಶಯ ತಿಳಿಸಿದರು. ಭಾರತ ದೇಶ ವಿವಿಧ ಜಾತಿ ಸಂಸ್ಕೃತಿಗಳಿಂದ ಕೂಡಿದೆ. ವಿವಿಧತೆಯಲ್ಲಿ ಏಕತೆಯಿರುವ ನಮ ದೇಶದಲ್ಲಿ ಎಲ್ಲರೂ ಒಟ್ಟಾಗಿ ಬಾಳಬೇಕು.
ಯಾವುದೇ ಧರ್ಮವೂ ದ್ವೇಷವನ್ನು ಬೋಧಿಸುವುದಿಲ್ಲ. ಎಲ್ಲ ಧರ್ಮಗಳೂ ಪ್ರೀತಿಯನ್ನು ಬೋಧಿಸುತ್ತವೆ ಎಂದು ಹೇಳಿದರು. ಮನುಕುಲದ ಒಳಿತಿಗಾಗಿ ಪ್ರಾರ್ಥನೆ ಮಾಡುವುದು ಅತ್ಯಂತ ಅವಶ್ಯ. ಮಾನವೀಯತೆಯಿಂದ ಪರಸ್ಪರ ಪ್ರೀತಿ ವಿಶ್ವಾಸದಿಂದ ಬಾಳುವುದು ಅವಶ್ಯ ಎಂದು ಅವರು ಪುನರುಚ್ಚರಿಸಿದರು.

**ಮೂರುಸಾವಿರ ಮಠ:** ಮುಸ್ಲಿಂ ಮುಖಂಡರು ಸಾಮೂಹಿಕ ಪ್ರಾರ್ಥನೆ ನಂತರ ಹುಬ್ಬಳ್ಳಿ ನಗರದ ಮೂರುಸಾವಿರ ಮಠಕ್ಕೆ ಭೇಟಿ ನೀಡಿ ಗುರುಸಿದ್ದ ರಾಜಯೋಗಿಂದ್ರ ಶ್ರೀಗಳ ಆಶೀರ್ವಾದ ಪಡೆದುಕೊಂಡು ಪರಸ್ಪರ ಶುಭಾಶಯ ಹಂಚಿಕೊಂಡರು. ಈ ವೇಳೆ ಮಾತನಾಡಿದ ಶ್ರೀಗಳು, ಬಸವ ಜಯಂತಿ ಮತ್ತು ರಂಜಾನ್ ಹಬ್ಬ ಒಂದೇ ದಿನ ಆಚರಿಸಲ್ಪಡುತ್ತಿದ್ದು, ಆ ದೇವರೇ ಭಾವೈಕ್ಯತೆಯಿಂದ ಇರುವಂತೆ ಈ ಹಬ್ಬಗಳನ್ನು ಒಟ್ಟಿಗೆ ಬರುವಂತೆ ಮಾಡಿದ್ದಾನೆ. ಹೀಗಾಗಿ ಎಲ್ಲರೂ ಶಾಂತಿಯಿಂದ ಸಂತೋಷದಿಂದ ಹಬ್ಬವನ್ನು ಆಚರಿಸಬೇಕು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಎಫ್.ಎಚ್.ಜಕ್ಕಪ್ಪನವರ, ಸದಾನಂದ ಡಂಗನವರ, ಅಂಜುಮನ್ ಇಸ್ಲಾಂ ಸಮಿತಿ ಅಧ್ಯಕ್ಷ ಎ.ಎಂ.ಹಿಂಡಸಗೇರಿ, ಬಾಬಾಜಾನ್ ಮುಧೋಳ, ಮುಸ್ಲಿಂ ಮುಖಂಡರುಗಳಾದ ಅನ್ವರ್ ಮುಧೋಳ್, ಮಜಾರ್ ಖಾನ್, ಬಾಬಾಜಾನ್ ಮುಧೋಳ್, ಶಫಿ ಮುದ್ದೇಬಿಹಾಳ, ಮುನಾಫ್ ದೇವಗಿರಿ, ಮೌಲಾ ಸಾಬ್ ನದಾಫ್ ಇದ್ದರು.

### ರಂಜಾನ್: ವಿಶ್ವ ಶಾಂತಿಗಾಗಿ ಸಾಮೂಹಿಕ ಪ್ರಾರ್ಥನೆ

ಪವಿತ್ರ ರಂಜಾನ್ ಹಬ್ಬದ ಹಿನ್ನೆಲೆಯಲ್ಲಿ ಮುಸ್ಲಿಂ ಬಾಂಧವರು ಈದ್ಗಾ ಮೈದಾನದಲ್ಲಿ ಸಮಾವೇಶಗೊಂಡು ವಿಶ್ವ ಶಾಂತಿಗಾಗಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ಧಾರ್ಮಿಕ ಗುರು ಮೌಲಾನ ಜಹೀರ್ ಉದ್ದೀನ್ ಖಾಜಿ ಅವರ ನೇತೃತ್ವದಲ್ಲಿ ನಮಾಜ್ ಮೂಲಕ ವಿಶ್ವದೆಲ್ಲಡೆ ಸುಖಶಾಂತಿ ನೆಮದಿ ನೆಲಸಿ, ಸಾಮರಸ್ಯ ಸಹಬಾಳ್ವೆಯಿಂದ ಜೀವನ ನಡೆಸುವಂತಾಗಲಿ, ಮಳೆ–ಬೆಳೆ ಚೆನ್ನಾಗಿ ಆಗಲಿ ಎಂದು ಪ್ರಾರ್ಥಿಸಲಾಯಿತು. ಪ್ರಾರ್ಥನೆಯ ನಂತರ ಹಿಂದೂ ಮುಸ್ಲಿಂ ಬಾಂಧವರು ಪರಸ್ಪರವಾಗಿ ಕೈ ಜೋಡಿಸಿ ಶುಭಾಶಯ ವಿನಿಮಯ ಮಾಡಿಕೊಂಡರು. ಸೌಹಾರ್ದತೆಗೆ ಸಾಕ್ಷಿಯಾದ

## ಆಶಾ ಕಾರ್ಯಕರ್ತೆಯರ ಸಮಸ್ಯೆಗಳನ್ನ ಪರಿಹರಿಸುವಂತೆ ವಿಧಾನಪರಿಷತ್ ಶಾಸಕ ಬಸನಗೌಡ ಬಾದರ್ಲಿಗೆ ಮನವಿ

❑ ನೈಜ್ಯ ದೇಸೆ ನ್ಯೂಸ್



**ಸಿಂಧನೂರು: ಸಿಂಧನೂರು ತಾಲೂಕಿನ ಎಲ್ಲಾ ಆಶಾ ಕಾರ್ಯಕರ್ತೆಯರು ಜನಸ್ಪಂದನ ಕಚೇರಿಯಲ್ಲಿ ಬಸನಗೌಡ ಬಾದರ್ಲಿ ಅವರನ್ನು ಭೇಟಿ ಮಾಡಿ ತಮ್ಮ ವಿವಿಧ ಸಮಸ್ಯೆಗಳ ಕುರಿತು ಮನವಿ ಸಲ್ಲಿಸಿದರು.**

ವೇತನ, ಪ್ರೋತ್ಸಾಹಧನ, ಮೂಲಭೂತ ಸೌಲಭ್ಯಗಳ ಕೊರತೆ ಹಾಗೂ ಕೆಲಸದ ಒತ್ತಡ ಸೇರಿದಂತೆ ಹಲವು ಸಮಸ್ಯೆಗಳನ್ನು ವಿವರಿಸಿ, ಅವುಗಳಿಗೆ ತಕ್ಷಣ ಸ್ಪಂದಿಸಿ ಶಾಶ್ವತ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ಅವರು ಕಾರ್ಯಕರ್ತೆಯರ ಮನವಿಯನ್ನು ಗಂಭೀರವಾಗಿ ಪರಿಗಣಿಸಿ, ಅವರ ಸಮಸ್ಯೆಗಳ ಕುರಿತು ಸಮಗ್ರವಾಗಿ ಚರ್ಚಿಸಿದರು. ಸಂಬಂಧಿತ ಇಲಾಖೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿ, ಶೀಘ್ರದಲ್ಲೇ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಜೊತೆಗೆ, ಸರ್ಕಾರದ ಮಟ್ಟದಲ್ಲಿ ಗಮನ ಸೆಳೆದು ಆಶಾ ಕಾರ್ಯಕರ್ತೆಯರ ಹಿತಾಸಕ್ತಿಗಾಗಿ ಮುಂದಾಗುವುದಾಗಿ ಹೇಳಿದರು. ಆಶಾ ಕಾರ್ಯಕರ್ತೆಯರು ಆರೋಗ್ಯ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವುದನ್ನು ಪ್ರಶಂಸಿಸಿದ ಅವರು, ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ಜನರ ಆರೋಗ್ಯ ಕಾಪಾಡುವಲ್ಲಿ ಅವರ ಪಾತ್ರ ಅಮೂಲ್ಯವಾಗಿದೆ ಎಂದು ತಿಳಿಸಿದರು. ಕಾರ್ಯಕರ್ತೆಯರ ಬೇಡಿಕೆಗಳಿಗೆ ನ್ಯಾಯ ಸಿಗುವಂತೆ ತಾವು ಸದಾ ಬೆಂಬಲ ನೀಡುವುದಾಗಿ ಭರವಸೆ ನೀಡಿದರು.

## ಮುಸ್ಲಿಂ ಬಾಂಧವರಿಗೆ ರಂಜಾನ್ ಹಬ್ಬದ ಶುಭಾಶಯ ಕೋರಿದ ಸಂಸದ ಜಿ ಕುಮಾರ್ ನಾಯಕ್

❑ ನೈಜ್ಯ ದೇಸೆ ನ್ಯೂಸ್



**ಈದ್ ಉಲ್ ಫಿತ್ರ್ ಹಬ್ಬದ ಪವಿತ್ರ ಹಾಗೂ ಸಂತೋಷಭರಿತ ಸಂದರ್ಭದಲ್ಲಿ ರಾಯಚೂರು ನಗರದ ಈದ್ಗಾ ಮೈದಾನದಲ್ಲಿ ಮುಸ್ಲಿಂ ಬಾಂಧವರೊಂದಿಗೆ ಸಮೂಹ ನಮಾಜ್‌ನಲ್ಲಿ ಪಾಲ್ಗೊಂಡಿದ್ದು ನನ್ನ ಜೀವನದ ಒಂದು ಸ್ಮರಣೀಯ ಕ್ಷಣವಾಗಿದೆ.**

ಈ ಪವಿತ್ರ ದಿನದಂದು ಎಲ್ಲರೊಂದಿಗೆ ಸೇರಿ ಪ್ರಾರ್ಥನೆ ಸಲ್ಲಿಸುವ ಮೂಲಕ ಏಕತೆ, ಸಹೋದರತ್ವ ಹಾಗೂ ಮಾನವೀಯ ಮೌಲ್ಯಗಳ ಮಹತ್ವವನ್ನು ಮತ್ತಷ್ಟು ಅನುಭವಿಸಿದೆ. ನಮಾಜ್ ನಂತರ ಮುಸ್ಲಿಂ ಬಾಂಧವ–ರಿಗೆ ಹೃದಯಪೂರ್ವಕ ಶುಭಾಶಯಗಳನ್ನು ತಿಳಿಸಿ, ಪರಸ್ಪರ ಅಪ್ಪುಗೆಗಳು, ಶುಭಾಶಯ ವಿನಿಮಯಗಳು ಹಬ್ಬದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿತು. ನಗರದಲ್ಲಿನ ಹಿರಿಯರು, ಯುವಕರು ಹಾಗೂ ಮಕ್ಕಳಿಂದ ಕೂಡಿದ ಈ ಸಮಾರಂಭವು ಒಗ್ಗಟ್ಟಿನ ಪ್ರತೀಕವಾಗಿತ್ತು.

ಈದ್ ಹಬ್ಬವು ನಮಗೆ ದಾನ, ಸಹಾನುಭೂತಿ, ಸಹಿಷ್ಣುತೆ ಹಾಗೂ ಪ್ರೀತಿಯ ಮಹತ್ವವನ್ನು ಸಾರುತ್ತದೆ. ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಹಬಾಳ್ವೆ ಬೆಳೆಸುವಲ್ಲಿ ಈ ಹಬ್ಬವು ಪ್ರಮುಖ ಪಾತ್ರವಹಿಸುತ್ತದೆ. ಈ ಪವಿತ್ರ ಹಬ್ಬವು ಪ್ರತಿಯೊಬ್ಬರ ಮನೆಮನೆಗೆ ಸುಖ, ಸಮೃದ್ಧಿ ಹಾಗೂ ಆಶೀರ್ವಾದಗಳನ್ನು ತರಲಿ ಎಂದು ಹಾರೈಸುತ್ತೇನೆ.

# ಜಾಲಹಳ್ಳಿಯಲ್ಲಿ ಪವಿತ್ರ ರಂಜಾನ್ ಹಬ್ಬ ಅದ್ದೂರಿಯಾಗಿ ಆಚರಣೆ

❑ ನೈಜ್ಯ ದೇಸೆ ನ್ಯೂಸ್

**ಜಾಲಹಳ್ಳಿ: ಮಾ 21 ಗ್ರಾಮದಲ್ಲಿ ಪವಿತ್ರ ರಂಜಾನ್ ಹಬ್ಬವನ್ನು ಎಲ್ಲಾ ಮುಸ್ಲಿಂ ಬಾಂಧವರು ಸೇರಿ ಅತ್ಯಂತ ಸಂಭ್ರಮ ಹಾಗೂ ಭಕ್ತಿಭಾವದಿಂದ ಆಚರಣೆ ಮಾಡಿದರು.**

ಹಬ್ಬದ ಅಂಗವಾಗಿ ಗ್ರಾಮದಲ್ಲಿರುವ ಕಬ್ರ್ ಸ್ಥಾನದಲ್ಲಿನ ಈದ್ಗಾ ಮೈದಾನದಲ್ಲಿ ಬೆಳಿಗ್ಗೆ 9 ಗಂಟೆಗೆ ಆಶರಖಾನ್ ದಿಂದ ಎಲ್ಲಾ ಮುಸ್ಲಿಂ ಬಾಂಧವರು ಪಾದಯಾತ್ರೆ ಮೂಲಕ ತೆರಳಿ, ಬೆಳಿಗ್ಗೆ 9:30ಕ್ಕೆ ಈದ್ಗಾ ಮೈದಾನ ತಲುಪಿದರು. ನಂತರ ಮೌಲಾನಾ ಮುಮ್ತಾಜ್ ರಹಿ ಅವರ ನೇತೃತ್ವದಲ್ಲಿ ಸಮೂಹ ಪ್ರಾರ್ಥನೆ ನೆರವೇರಿತು. ಈ ಸಂದರ್ಭದಲ್ಲಿ ಮಾತನಾಡಿದ ಮೌಲಾನಾ ಮುಮ್ತಾಜ್ ರಹಿ ಅವರು, ಸಮಾಜದಲ್ಲಿ ಎಲ್ಲರೂ ಪರಸ್ಪರ ಸಹಾನುಭೂತಿ ಮತ್ತು ಕರುಣೆಯಿಂದ ನಡೆದುಕೊಳ್ಳಬೇಕು ಎಂದು ಕರೆ ನೀಡಿದರು. ಬಡವರೊಂದಿಗೆ ಸಹಾನುಭೂತಿ ತೋರಿಸಿ, ಎಲ್ಲ ಸಮಾಜದ ಬಂಧುಗಳನ್ನು ಹಬ್ಬಕ್ಕೆ ಆಹ್ವಾನಿಸಿ ಊಟೋಪಚಾರ ನೀಡುವ ಮೂಲಕ ಸಾಮಾಜಿಕ ಐಕ್ಯತೆ ಕಾಪಾಡಬೇಕೆಂದು ತಿಳಿಸಿದರು. ಧರ್ಮವು ಬಡ–ಶ್ರೀಮಂತ ಎಂಬ ಭೇದವಿಲ್ಲದೆ ಎಲ್ಲರನ್ನು ಒಂದೇ ಸಾಲಿನಲ್ಲಿ ನಿಲ್ಲಿಸುತ್ತದೆ ಎಂದು ಹೇಳಿದರು.

ದಾನಧರ್ಮದ ಮೂಲಕ ಸಮಾಜದಲ್ಲಿ ಶಾಂತಿ ನೆಲೆಸಬೇಕು ಎಂದು ಸಂದೇಶ ನೀಡಿದರು. ಇದೇ ಸಂದರ್ಭದಲ್ಲಿ ಜಾಮಿಯಾ ಮಸೀದಿ ಅಧ್ಯಕ್ಷರಾದ ಬಾಬಾ ಮೆಡಿಕಲ್ ಅವರು ಯುವಕರಿಗೆ ಮೊಬೈಲ್ ಬಳಕೆಯಲ್ಲಿ ಎಚ್ಚರಿಕೆಯಿಂದಿರಬೇಕು ಎಂದು ಸಲಹೆ ನೀಡಿದರು. ವಿಶೇಷವಾಗಿ ಸಾಮಾಜಿ–ಕ ಜಾಲತಾಣಗಳಲ್ಲಿ ಅನಾವಶ್ಯಕವಾಗಿ ಶೇರ್ ಮತ್ತು ಲೈಕ್ ಮಾಡುವುದನ್ನು ತಪ್ಪಿಸಿಕೊಳ್ಳಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಜಾಮಿಯಾ ಮಸೀದಿ ಕಮಿಟಿ , ಖಬರ್ ಸ್ಥಾನ ಕಮಿಟಿ, ಟಿಪ್ಪು ಸುಲ್ತಾನ್ ಕಮಿಟಿ, ಶಾಹಿನ್ ಮಸೀದಿ ಕಮಿಟಿ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಭಾಗವಹಿಸಿದರು. ಜೊತೆಗೆ ಊರಿನ ಪ್ರಮುಖರಾದ ಮೈನುದ್ದೀನ್ ಗುತ್ತೇದಾರರು, ಹಾಜಿ ಮಲಿಕ್ ಹಮ್ಮದ್ ಸಾಬ್, ಬಾಬಾ ಮೆಡಿಕಲ್, ಯಾಸಿನ್ ಮುಲ್ಲಾ ನಸೀರ್ ಸಾಬ್ ಮುಲ್ಲಾ, ಶೇಖ್ ಮಹಿಬೂಬ್ ಸಾಬ್ ಕಂಟ್ರಾಕ್ಟರ್ , ಹೈದರಲಿಮುಲ್ಲಾ ರಾಜ್ ಮಹಮ್ಮದ್ ಕಲೆಗಾರ್ , ಖುರಸಿದ್ ಪಟೇಲ್, ಇಮಾಮ್ ಸಾಬ್ ಉದ್ದಾರ, ಅಲಿಬಾಬಾ ಪತ್ರಕರ್ತರು, ಶಬ್ಬೀರ್ ಸುಣ್ಣದಕಲ್, ಜಾಕಿರ್ ಹುಸೇನ ಅರ್ತಿ ಅಬ್ದುಲ್ಗಣಿಸಿತಾರಾ ಬೇಕರಿ, ಹುಸೇನ್ ಭಾಷ್ಅರ್ತಿ, ಹುಸೇನ್ ಬಾಷಾಡ್ರೈವರ್, ರಿಯಾಜ ಅರ್ತಿ, ಅಬ್ದುಲ್ ನಬಿಸಾಬ್, ಅಬ್ಬಾಸ್ ಅಲಿಸಾಬ್ ಹಾಗೂ ಜಾಲಹಳ್ಳಿ ಗ್ರಾಮ ಪಂಚಾಯತ್ ಸದಸ್ಯರಾದ ಮಕತು ಪರಾಸಿ,ಅಬ್ದುಲ್ ರೆಹಮಾನ್ ಖುರೇಶಿ, ಹೈದರ್ ಉದ್ದಾರ ಹುಸೇನ ನಾಸಿ, ಬುಡನ್ ಸಾಬ್ ಮಾಸನೂರ್,ಸೇ–ರಿದಂತೆ ಅನೇಕರು ಉಪಸ್ಥಿತರಿದ್ದರು. ಗ್ರಾಮ ಪಂಚಾಯತ್ ವತಿಯಿಂದ ಸ್ವಚ್ಛತಾ ವ್ಯವಸ್ಥೆ ಮಾಡಲಾಗಿದ್ದು, ಜಾಲಹಳ್ಳಿ ಪೊಲೀಸ್ ಠಾಣೆಯಿಂದ ಸೂಕ್ತ ಬಂದೋಬಸ್ತ್ ಒದಗಿಸಲಾಗಿ–ತ್ತು. ಇದಕ್ಕಾಗಿ ಮುಸ್ಲಿಂ ಮುಖಂಡರು ಗ್ರಾಮ ಪಂಚಾಯತ್ ಮತ್ತು ಪೊಲೀಸ್ ಇಲಾಖೆಗೆ ಧನ್ಯವಾದಗಳನ್ನು ಸಲ್ಲಿಸಿದರು.





## ಸಾಹಿತ್ಯ ಸಿಂಚನ

ಜಲ
ನೀರು ಜೀವನದ ನಾಡಿ,
ನಿಶ್ಯಬ್ದದಲಿ ಮಾತಾಡುವ ಗೀತೆ,
ಹನಿಹನಿಯಾಗಿ ಹರಿದು ಬಂದು
ಭೂಮಿಗೆ ಜೀವ ತುಂಬುವ ಪ್ರೀತಿಯ ಮಳೆ.

ನದಿ ರೂಪದಲ್ಲಿ ನಗುತ ಹರಿದು,
ಕೊಳಗಳಲಿ ಶಾಂತವಾಗಿ ನೆಲೆಸಿ,
ಮರಗಳಿಗೆ ಹಸಿರು ಹೊದಿಸಿ
ಪ್ರಕೃತಿಗೆ ಹೊಳಪು ಕೊಡುವ ಚೈತನ್ಯ.

ಹನಿಯಾದರೂ ಅಮೂಲ್ಯವದು,
ಹರಿದುಹೋದರೆ ಮರಳಿ ಸಿಗದು,
ಸಂರಕ್ಷಿಸೋಣ ಈ ನೀರಿನ ಹಿರಿಮೆ
ನಾಳೆಯ ಬದುಕಿಗೆ ಅದು ದೀಪವೇ.

ನೀರು ನಮ್ಮ ಜೀವಾಳ,
ಅದನ್ನು ಕಾಪಾಡೋಣ ಎಲ್ಲರೂ,
ಪ್ರತಿ ಹನಿಯ ಮೌಲ್ಯ ಅರಿತು
ಭೂಮಿಯನ್ನು ಹಸಿರಾಗಿಸೋಣ.

**ಬಸವರಾಜ ಜಿ**

# ಹೋಲಿ ಫ್ಯಾಮಿಲಿ ಚರ್ಚ್‌ನಲ್ಲಿ ಆತ್ಮೀಯ ಅನುಭವ ನೀಡಿದ ಯೇಸು ಜೀವನ ನಾಟಕ

❏ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರು ನಗರದ ಹೋಲಿ ಫ್ಯಾಮಿಲಿ ಚರ್ಚ್‌ನಲ್ಲಿ ಭಕ್ತಿ, ಶ್ರದ್ಧೆ ಮತ್ತು ಆಧ್ಯಾತ್ಮಿಕತೆಯ ಸಮಾಗಮವಾಗಿ ನಡೆದ ದೃಶ್ಯ ರೂಪಕ ನಾಟಕ ಕಾರ್ಯಕ್ರಮ ಭವ್ಯ ಯಶಸ್ಸು ಕಂಡಿತು.**


ಕ್ರಿಸ್ತ ಯೇಸುರಾಜರ ಜನನದಿಂದ ಹಿಡಿದು ಬೋಧನೆ, ಜೀವನ, ಮರಣ ಮತ್ತು ಪುನರುತ್ಥಾನದ ಮಹತ್ವದ ಘಟ್ಟಗಳನ್ನು ಅತ್ಯಂತ ಮನಮುಟ್ಟುವ ರೀತಿಯಲ್ಲಿ ಚಿತ್ರಿಸಿದ ಈ ನಾಟಕವು ಭಕ್ತರಲ್ಲಿ ಆಳವಾದ ಆತ್ಮೀಯ ಅನುಭವವನ್ನು ಮೂಡಿಸಿತು. ಬೆಂಗಳೂರು ಸೇಂಟ್ ಪ್ಯಾಟ್ರಿಕ್ ಚರ್ಚ್‌ನ ಪಾರಿಷ್ ಪ್ರೀಸ್ಟ್ ಆಗಿರುವ ವಂ. ಫಾದರ್ ಕ್ರಿಸ್ಟಿ ರಾಜ್ ಹಾಗೂ ಅವರ ತಂಡ ನೀಡಿದ ಪ್ರದರ್ಶನವು ಅತ್ಯಂತ ಶ್ರೇಷ್ಠವಾಗಿದ್ದು, ಪ್ರತಿಯೊಂದು ದೃಶ್ಯವೂ ಯೇಸುಕ್ರಿಸ್ತನ ತ್ಯಾಗ, ಪ್ರೀತಿ ಮತ್ತು ಮಾನವೀಯತೆಯ ಸಂದೇಶವನ್ನು ಜೀವಂತವಾಗಿ ತೋರಿಸಿತು.

ಈ ನಾಟಕವು ಕೇವಲ ಮನರಂಜನೆಯಷ್ಟೇ ಅಲ್ಲದೆ, ಭಕ್ತಿಯ ಸಾರವನ್ನು ಸಾರುವ ಆಧ್ಯಾತ್ಮಿಕ ಯಾತ್ರೆಯಂತಿತ್ತು. ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳನ್ನು ಜವಳಗೇರಾ ವಿಚಾರಣೆಯ ಗುರುಗಳಾದ ಫಾದರ್ ರಾಯಪ್ಪ ಅವರು ಹೃತ್ಪೂರ್ವಕವಾಗಿ ಸ್ವಾಗತಿಸಿ, ಇಂತಹ ಭಕ್ತಿ ಕಾರ್ಯಕ್ರಮಗಳು ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಬಲಪಡಿಸುವುದಾಗಿ ತಿಳಿಸಿದರು. ವಿಚಾರಣೆಯು ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಇಂತಹ ಸಾರ್ಥಕ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದು ಸಂತೋಷದ ವಿಷಯವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.



ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಸಿಂಧನೂರು ವಲಯದ ಶ್ರೇಷ್ಠ ಗುರುಗಳಾದ ಫಾದರ್ ಜ್ಞಾನ ಪ್ರಕಾಶಂ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ, "ಯೇಸುಕ್ರಿಸ್ತನ ಜೀವನವು ಪ್ರತಿಯೊಬ್ಬರಿಗೂ ಮಾರ್ಗದರ್ಶಕವಾಗಿದೆ. ಇಂತಹ ನಾಟಕಗಳ ಮೂಲಕ ಆತನ ಸಂದೇಶವನ್ನು ಜನರಿಗೆ ತಲುಪಿಸುವುದು ಅತ್ಯಂತ ಮಹತ್ವದ ಸೇವೆಯಾಗಿದೆ. ಇವು ಭಕ್ತರಲ್ಲಿ ವಿಶ್ವಾಸವನ್ನು ಬಲಪಡಿಸಿ, ಸತ್ಸಂಸ್ಕಾರಗಳ ಕಡೆಗೆ ದಾರಿತೋರುತ್ತವೆ," ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕನ್ಯಾ ಸ್ತ್ರೀಯರು, ಧರ್ಮಗುರುಗಳು ಹಾಗೂ ಭಕ್ತ ಸಮೂಹವು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಇನ್ನಷ್ಟು ಭವ್ಯಗೊಳಿಸಿದರು.



ನಾಟಕದ ಪ್ರತಿಯೊಂದು ಘಟ್ಟಕ್ಕೂ ಪ್ರೇಕ್ಷಕರು ಭಕ್ತಿಭಾವದಿಂದ ಸ್ಪಂದಿಸಿದ್ದು, ಕಾರ್ಯಕ್ರಮಕ್ಕೆ ವಿಶಿಷ್ಟ ಮೆರುಗು ತಂದಿತು. ಕಾರ್ಯಕ್ರಮದ ಅಂತ್ಯದಲ್ಲಿ ಎಲ್ಲಾ ಸಹಕರಿಸಿದವರಿಗೆ ಕೃತಜ್ಞತೆಗಳನ್ನು ಸಲ್ಲಿಸಲಾಯಿತು. ಈ ರೀತಿಯ ಆಧ್ಯಾತ್ಮಿಕ ಕಾರ್ಯಕ್ರಮಗಳು ಸಮಾಜದಲ್ಲಿ ಶಾಂತಿ, ಪ್ರೀತಿ ಮತ್ತು ಸಹಾನುಭೂತಿಯ ಮೌಲ್ಯಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.

## ರಾಜ್ಯಸಭೆ, ವಿಧಾನ ಪರಿಷತ್‌ಗಳಲ್ಲಿ ಮುಸ್ಲಿಮರಿಗೆ ಪ್ರಾತಿನಿಧ್ಯದ ಷರತ್ತಿನ ಮೇಲೆ ಸಮರ್ಥ್‌ಗೆ ಟಿಕೆಟ್

❏ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ರಾಜ್ಯಸಭೆ ಹಾಗು ವಿಧಾನ ಪರಿಷತ್‌ಗಳಲ್ಲಿ ಮುಸ್ಲಿಮರಿಗೆ ರಾಜಕೀಯ ಪ್ರಾತಿನಿಧ್ಯ ನೀಡಬೇಕು ಎಂಬ ಷರತ್ತಿನ ಮೇಲೆ ದಾವಣಗೆರೆ ದಕ್ಷಿಣದ ಕಾಂಗ್ರೆಸ್ ಟಿಕೆಟ್ ಅನ್ನು ಎಸ್. ಎಸ್ ಮಲ್ಲಿಕಾರ್ಜುನ ಅವರ ಪುತ್ರ ಸಮರ್ಥ್‌ಗೆ ಬಿಟ್ಟುಕೊಡಲು ಮುಸ್ಲಿಂ ಸಮಾಜದ ಸಚಿವರು, ಶಾಸಕರು ಹಾಗು ಮುಖಂಡರು ಒಪ್ಪಿಗೆ ಸೂಚಿಸಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.**



ಶನಿವಾರ ರಾತ್ರಿ ಹತ್ತು ಗಂಟೆಯವರೆಗೂ ಎರಡೂ ಗುಂಪುಗಳ ಸಭೆ ವರಿಷ್ಠರ ಸಮ್ಮುಖದಲ್ಲಿ ನಡೆಯಿತು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ರಾಜ್ಯ ಉಸ್ತುವಾರಿ ಸುರ್ಜೆವಾಲ ಅವರು ಸಭೆ ನಡೆಸಿದರು. ವರಿಷ್ಠರು ಮುಸ್ಲಿಂ ಸಮುದಾಯದ ಮುಖಂಡರ ಮನವೊಲಿಸು ನಲ್ಲಿ ಯಶಸ್ವಿಯಾಗಿದ್ದು ಸಮರ್ಥ್ ಅವರಿಗೆ ಟಿಕೆಟ್ ಅಂತಿಮವಾಗಿದೆ. ಒಂದು ಮೂಲಗಳ ಪ್ರಕಾರ ಸಮರ್ಥ್ ಅವರಿಗೆ ಬಿ ಫಾರಂ ನೀಡಲಾಗಿದೆ ಎನ್ನಲಾಗಿದ್ದು, ಸೋಮವಾರ ನಾಮಪತ್ರ ಸಲ್ಲಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡ ಭಾಗವಹಿಸಲಿದ್ದಾರೆ ಎಂದು ತಿಳಿದು ಬಂದಿದೆ. ಸಭೆಯಲ್ಲಿ ಸಚಿವರಾದ ಜಮೀರ್ ಅಹ್ಮದ್, ಎಸ್.ಎಸ್. ಮಲ್ಲಿಕಾರ್ಜುನ್, ಭೈರತಿ ಸುರೇಶ್, ಶಾಸಕರಾದ ಹ್ಯಾರಿಸ್, ರಿಜ್ವಾನ್, ಹರ್ಷದ್ ಮುಂತಾದವರು ಭಾಗವಹಿಸಿದ್ದರು. ಭಾನುವಾರ ಬೆಳಿಗ್ಗೆ ದಾವಣಗೆರೆ ದಕ್ಷಿಣ ಹಾಗು ಬಾಗಲಕೋಟೆ ಕ್ಷೇತ್ರಗಳ ಆಯ್ಕೆಯನ್ನು ಅಭ್ಯರ್ಥಿಗಳ ಅಧಿಕೃತವಾಗಿ ಘೋಷಿಸಲಾಗುತ್ತದೆ ಎಂದು ತಿಳಿದು ಬಂದಿದೆ. ವಸತಿ ಸಚಿವ ಜಮೀರ್ ಅಹ್ಮದ್ ಸೇರಿದಂತೆ ಹಲವು ಮುಸ್ಲಿಂ ಮುಖಂಡರು ಅಲ್ಪ ಸಂಖ್ಯಾತ ಅಭ್ಯರ್ಥಿಗೆ ಟಿಕೆಟ್ ನೀಡಬೇಕು ಎಂದು ಪಟ್ಟು ಹಿಡಿದಿದ್ದರು. ಜಮೀರ್ ಅಹ್ಮದ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವ ಬೆದರಿಕೆಯನ್ನೂ ಹಾಕಿದ್ದರೆನ್ನಲಾಗಿದೆ. ಇನ್ನೊಂದೆಡೆ ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಈಶ್ವರ್ ಖಂಡ್ರೆ ಸೇರಿದಂತೆ ಹಲವರು ಎಸ್.ಎಸ್.ಮಲ್ಲಿಕಾರ್ಜುನ್ ಪುತ್ರ ಸಮರ್ಥ್‌ಗೆ ಟಿಕೆಟ್ ನೀಡುವಂತೆ ಬಿಗಿ ಪಟ್ಟು ಹಾಕಿದ್ದರು. ಉಭಯ ಮುಖಂಡರು ಶನಿವಾರ ರಾತ್ರಿ ಒಂದು ಒಪ್ಪಂದಕ್ಕೆ ಬಂದಿದ್ದು ಅಭ್ಯರ್ಥಿಗಳನ್ನು ಅಂತಿಮಗೊಳಿಸುವಲ್ಲಿ ವರಿಷ್ಠರು ಸಫಲರಾದರು ಎನ್ನಲಾಗಿದೆ. ಮುಂಬರುವ ರಾಜ್ಯಸಭೆ 'ಮತ್ತು ವಿಧಾನ ಪರಿಷತ್‌ಗಳಲ್ಲಿ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ನೀಡಬೇಕೆಂಬ ಷರತ್ತಿನ ಮೇಲೆ ಸಮಸ್ಯೆ ಬಗೆಹರಿದಿದೆ ಎಂದು ತಿಳಿದು ಬಂದಿದೆ. ಬಾಗಲಕೋಟೆ ಕ್ಷೇತ್ರದಲ್ಲಿ ಹೆಚ್.ವೈ. ಮೇಟಿ ಅವರ ಪುತ್ರ ಉಮೇಶ್ ಮೇಟಿಗೆ ಟಿಕೆಟ್ ಅಂತಿಮ ಗೊಳಿಸಲಾಗಿದೆ ಎನ್ನಲಾಗಿದೆ.

# ಪ್ರವಚನ ಮಹಾಮಂಗಲ ಕಾರ್ಯಕ್ರಮ



❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಲ್ಲೂಕಿನ ಗಡಿಸೋಮನಾಳ ಗ್ರಾಮದ ಹಿರೇಮಠದ ಗುರುಬಸವ ಮಹಾಮನೆಯಲ್ಲಿ ಗುರು ಬಸವಲಿಂಗೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಜನಜಾಗೃತಿಗಾಗಿ ಬಸವಾದಿ ಸಕಲ ಶರಣರ 45ನೆಯ ಶರಣರ ಹಬ್ಬ ಮತ್ತು ಲಿಂಗೈಕ್ಯ ಇಂದುಧರ ಸ್ವಾಮೀಜಿ ಅವರ ಪ್ರಥಮ ಪುಣ್ಯ ಸ್ಮರಣೆ ಕಾರ್ಯಕ್ರಮವು ಶುಕ್ರವಾರ ನೆರವೇರಿತು.**

ಮಾ.9 ರಿಂದ ವಿವಿಧ ಪ್ರವಚನಕಾರರಿಂದ ನಡೆದು ಬಂದ ಪ್ರವಚನ ಕಾರ್ಯಕ್ರಮ ಶುಕ್ರವಾರ ಮಹಾಮಂಗಲವಾಯಿತು. ನಂತರ ನಡೆದ ಧರ್ಮಸಭೆಯಲ್ಲಿ ಟಿಗರಳ್ಳಿ ಮರುಳಶಂಕರದೇವರಮಠದ ಸಿದ್ಧಬಸವ ಕಬೀರ ಸ್ವಾಮೀಜಿ, ಮನಗೂಳಿ ವಿರಕ್ತಮಠದ ವೀರತೀಶಾನಂದ ಸ್ವಾಮೀಜಿ, ಕೋರವಾರ ಚೌಕಿಮಠದ ಮುರುಗೇಂದ್ರಸ್ವಾಮೀಜಿ, ಮಲ್ಲಿಕಾರ್ಜುನ ಸತ್ಯಂಪೇಟೆ, ಶ್ರೀಮಠದ ಚಂದ್ರಶೇಖರಯ್ಯ ಹಿರೇಮಠ, ಸಮರ್ಥ ಹಿರೇಮಠ, ಕರ್ನಾಟಕ ರಾಜ್ಯ ರೈತ ಸಂಘದ ಮಹಿಳಾ ರಾಜ್ಯಾಧ್ಯಕ್ಷೆ ನಾಗರತ್ನಮ್ಮ ಪಾಟೀಲ, ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮಲ್ಲಿಕಾರ್ಜುನ ಸತ್ಯಂಪೇಠ, ವಿಜಯಪುರ ಜಿಲ್ಲಾ ಬಸವ ಕೇಂದ್ರದ ಅಧ್ಯಕ್ಷ ನಾನಾಗೌಡ ಪಾಟೀಲ, ನಿವೃತ್ತ ನ್ಯಾಯಾಧೀಶ ಸಾಹೇಬಣ್ಣ ಮೇಲಗಲ್ಲ, ಶಿಕ್ಷಕಿ ಶಿವಲೀಲಾ ಮ.ಮುರಾಳ, ಮಹಾಂತೇಶ ಮುರಾಳ, ಸಂಗಣ್ಣ ಗುಳಗಿ, ರಾಮನಗೌಡ ಕುಂಟರೆಡ್ಡಿ, ಸಂಗೂ ಹರವಾಳ, ಮುತ್ತು ದೇಶೇಕರ, ಮೊದಲಾದವರಿದ್ದರು.

101 ಸಾಧು ಮಹಾತ್ಮರಿಗೆ ಹೊಸಬಟ್ಟೆ ಕಾಣಿಕೆ ನೀಡಿ ಸನ್ಮಾನಿಸಲಾಯಿತು.ನಂತರ ಸಾಮೂಹಿಕ ಮಹಾಪ್ರಸಾದ ಜರುಗಿತು. ಶಹಾಪುರದ ಸಾಹಿತಿ ಶಿವಣ್ಣ ಇಜೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿವರುದ್ರ ಹುಳ್ಳಿ ಸತ್ಯಂಪೇಠ ನಿರ್ವಹಿಸಿದರು. ಶಿಕ್ಷಕ ವೀರೇಶ ಕಾಜಗಾರ ಸ್ವಾಗತಿಸಿದರು.

## ಒಳ ಮೀಸಲಾತಿ ವಿರೋಧಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಪ್ರತಿಭಟನೆಗೆ ಗೋರ ಸೇನಾ ಬೆಂಬಲ

❏ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ರಾಜ್ಯ ಸರ್ಕಾರ ಜಾರಿಗೆ ತರುತ್ತಿರುವ ಒಳಮೀಸಲಾತಿ ರೋಸ್ಟರ್ ಹಂಚಿಕೆ ಕ್ರಮವನ್ನು ವಿರೋಧಿಸಿ ಹಾಗೂ ಹಳೆಯ ಮೀಸಲಾತಿ ವ್ಯವಸ್ಥೆಯನ್ನು ಮುಂದುವರಿಸುವಂತೆ ಆಗ್ರಹಿಸಿ ಮಾರ್ಚ್ 24 ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಪ್ರತಿಭಟನೆಗೆ ಗೋರ ಸೇನಾ ರಾಷ್ಟ್ರೀಯ ಸಂಘಟನೆ ಮುಖಂಡ ಅಮರೇಶ್ ಸರ್ಕಾರ್ ಬೆಂಬಲ ಘೋಷಿಸಿದ್ದಾರೆ.**



ಅವರಿಂದು ಪತ್ರಿಕಾಗೋಷ್ಠಿಯನ್ನು ಉದ್ದೇಶಿಷಿ ಮಾತನಾಡುತ್ತಾ ಒಳಮೀಸಲಾತಿ ಜಾರಿಯಿಂದ ಬಂಜಾರ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿದರು. ಈಗಾಗಲೇ ರಾಜ್ಯದ ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆದಿರುವ ನೇಮಕಾತಿಗಳಲ್ಲಿ ರೋಸ್ಟರ್ ಬಿಂದುವಿನ ಅನ್ವಯ ಬಿ ಮತ್ತು ಸಿ ವರ್ಗಗಳಿಗೆ ಶೂನ್ಯ ಉದ್ಯೋಗ ಹಂಚಿಕೆ ಆಗಿರುವುದನ್ನು ಅವರು ತೀವ್ರವಾಗಿ ಖಂಡಿಸಿದರು. ಈ ಪರಿಸ್ಥಿತಿ ಮುಂದುವರಿದರೆ ಸಮುದಾಯದ ಯುವಕರಿಗೆ ಉದ್ಯೋಗಾವಕಾಶಗಳು ಕಡಿಮೆಯಾಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.


ಹೀಗಾಗಿ, ಸರ್ಕಾರ ತಕ್ಷಣವೇ ಒಳಮೀಸಲಾತಿ ರೋಸ್ಟರ್ ಹಂಚಿಕೆಯನ್ನು ಹಿಂತೆಗೆದು, ಹಿಂದಿನ ಮೀಸಲಾತಿ ವ್ಯವಸ್ಥೆಯನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸಿದರು. ಮಾರ್ಚ್ 24 ರಂದು ನಡೆಯುವ ಪ್ರತಿಭಟನೆಗೆ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲೂಕಿನ ಎಲ್ಲಾ ತಾಂಡಾಗಳ ನಾಯಕರು, ಕಾರ್ಯಕರ್ತರು ಹಾಗೂ ಯುವಕರು ಭಾಗವಹಿಸಿ ಬೆಂಬಲ ಸೂಚಿಸಲಿದ್ದಾರೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಅಮರೇಶ ಸರ್ಕಾರ್, ಅಮರೇಶ್ ರಾಠೋಡ್, ದೇವರಾಜ ಪವಾರ, ಅಮರೇಶ ಕಾರಬರಿ, ಪ್ರಕಾಶ ರಾಠೋಡ್ ಹಾಗೂ ಪ್ರವೀಣ ಕುಮಾರ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಮುಸ್ಲಿಂ ಭಾಂದವರು ಸಡಗರ ಸಂಭ್ರಮದಿಂದ ಆಚರಿಸಿದ (ಈದ್ ಉಲ್ ಫಿತರ್) ರಂಜಾನ್ ಹಬ್ಬ

❏ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಒಂದು ತಿಂಗಳ ಕಾಲ ಪವಿತ್ರ ರಂಜಾನ್ ಮಾಸದ ಉಪವಾಸ ಆಚರಣೆಯ ಬಳಿಕ ಶುಕ್ರವಾರ ರಾತ್ರಿ ಚಂದ್ರ ದರ್ಶನವಾದ ಹಿನ್ನೆಲೆಯಲ್ಲಿ ಇಂದು ಲಿಂಗಸಗೂರು ತಾಲೂಕಿನಾದ್ಯಂತ ಈದ್ ಉಲ್ ಫಿತರ್ (ರಂಜಾನ್) ಹಬ್ಬವನ್ನು ಮುಸ್ಲಿಂ ಬಾಂಧವರು ಸಂಭ್ರಮದಿಂದ ಆಚರಿಸಿದರು.**

ಈದ್ ಉಲ್ ಫಿತರ್ (ರಂಜಾನ್) ಹಬ್ಬದ ಹಿನ್ನೆಲೆಯಲ್ಲಿ ಇಂದು ಲಿಂಗಸಗೂರಿನ ಕರಡಕಲ್ ಕೆರೆಯ ಹತ್ತಿರದ ಈದ್ಗ ಮೈದಾನದಲ್ಲಿ ಮುಸ್ಲಿಂ ಬಾಂಧವರು ಸಾಮೂಹಿಕ ನಮಾಜ್ ನೆರವೇರಿಸಿ ಈ ನಮಾಜ್ ನಲ್ಲಿ ನೂರಾರು ಮುಸ್ಲಿಂ ಬಾಂದವರು ನಮಾಜ್ ನಲ್ಲಿ ಪಾಲ್ಗೊಂಡರು. ಈದ್ ಉಲ್ ಫಿತರ್ ( ರಂಜಾನ್ ) ಮಸೀದಿಗಳಲ್ಲಿ ಈದ್ ಪ್ರಾರ್ಥನೆಯನ್ನು ಮಾಡುವ ಮೂಲಕ ಪ್ರಾರಂಭವಾಗುತ್ತದೆ. ಈ ಹಿನ್ನೆಲೆಯಲ್ಲಿ ನಗರದ





ಈದ್ಗ ಮೈದಾನದಲ್ಲಿ ನೂರಾರು ಮಂದಿ ಮುಸ್ಲಿ ಬಾಂದವರು ವಿಶೇಷ ಸಾಮೂಹಿಕ ಪ್ರಾರ್ಥನೆಯಲ್ಲಿ ತೊಡಗಿದರು.ನಮಾಜ್ ಬಳಿಕ ಎಲ್ಲರೂ ಹಬ್ಬದ ಶುಭಾಶಯವನ್ನು ವಿನಿಮಯ ಮಾಡಿಕೊಂಡು ಬಳಿಕ ಬಡವರಿಗೆ ದಾನ ಧರ್ಮ ಮಾಡುವ ಮೂಲಕ ಹಬ್ಬ ಆಚರಿಸಿದರು. ಈ ಸಂದರ್ಭದಲ್ಲಿ ಮುಸ್ಲಿಂ ಸಮುದಾಯದ ಹಿರಿಯರು,

# ಬಳಗಾನೂರು ಪಟ್ಟಣ ಪಂಚಾಯಿತಿ ಉಪಾಧ್ಯಕ್ಷರಾಗಿ ಆಯ್ಕೆಯಾದ ಹುಸೇನ್ ಬಾಷಾ ಅವರಿಗೆ ಇರ್ಫಾನ್ ಕೆ ಅವರಿಂದ ಗೌರವ ಸನ್ಮಾನ

❏ ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಬಳಗಾನೂರು ಪಟ್ಟಣ ಪಂಚಾಯಿತಿಯ ಉಪಾಧ್ಯಕ್ಷರಾಗಿ ಆಯ್ಕೆಯಾದ ಹುಸೇನ್ ಬಾಷಾ ಬೂದುಗುಂಪ ಅವರಿಗೆ ಪಟ್ಟಣದ ಅವರ ನಿವಾಸದಲ್ಲಿ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾಮೆಡಿಕಲ್ ಕಾಲೇಜು ಸಿಂಧನೂರಿನ ಅಧ್ಯಕ್ಷರಾದ ಶ್ರೀ ಇರ್ಫಾನ್ ಕೆ ಹಾಗೂ ಅವರ ಸಹೋದರರು ಭೇಟಿ ನೀಡಿ ಹಾರ್ದಿಕವಾಗಿ ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು.**

ಈ ಸಂದರ್ಭದಲ್ಲಿ ಆತ್ಮೀಯ ಹಾಗೂ ಭಾವನಾತ್ಮಕ ವಾತಾವರಣ ನಿರ್ಮಾಣವಾಗಿದ್ದು, ಹೂಮಾಲೆ ಹಾಕಿ, ಶಾಲು ಹೊದಿಸಿ ಸಿಹಿ ತಿನ್ನಿಸಿ ಗೌರವ ಸಲ್ಲಿಸಲಾಯಿತು.ಕಾರ್ಯಕ್ರಮದಲ್ಲಿ ಮಾತನಾಡಿದ ಸನ್ ರೈಸ್ ಕಾಲೇಜಿನ ಅಧ್ಯಕ್ಷರಾದ ಇರ್ಫಾನ್ ಕೆ ಅವರು, "ಸಣ್ಣ ವಯಸ್ಸಿನಲ್ಲಿ ರಾಜಕೀಯ ಕ್ಷೇತ್ರಕ್ಕೆ ಕಾಲಿಟ್ಟ ಹುಸೇನ್ ಬಾಷಾ ಅವರು ಅನೇಕ ಸವಾಲುಗಳನ್ನು ಧೈರ್ಯದಿಂದ ಎದುರಿಸಿ, ಜೀವನದ ಏರುಪೇರುಗಳನ್ನು ಸಮರ್ಥವಾಗಿ ನಿಭಾಯಿಸಿ ಇಂದು ಈ ಮಟ್ಟಕ್ಕೆ ಏರಿದ್ದಾರೆ. ಅವರ ಈ ಸಾಧನೆ ಕೇವಲ ವ್ಯಕ್ತಿಗತ ಜಯವಲ್ಲ,



ಸಂಪೂರ್ಣ ಸಮಾಜದ ಹೆಮ್ಮೆ. ಅವರ ಪರಿಶ್ರಮ, ತಾಳ್ಮೆ ಮತ್ತು ಜನಸೇವೆ ಮಾಡುವ ಮನೋಭಾವವೇ ಇವರನ್ನು ಈ ಸ್ಥಾನಕ್ಕೆ ತಂದಿದೆ," ಎಂದು ಹೇಳಿದರು.

ಇನ್ನೂ ಮುಂದುವರೆದು ಮಾತನಾಡಿದ ಅವರು,"ಹುಸೇನ್ ಬಾಷಾ ಅವರು ಸದಾ ಬಡವರ, ದೀನ ದಲಿತರ ಹಾಗೂ ಹಿಂದುಳಿದವರ ಪರ ನಿಂತು ಅವರ ಸಮಸ್ಯೆಗಳಿಗೆ ಸ್ಪಂದಿಸುವ ಹೃದಯವಂತ ನಾಯಕ. ಅವರ ಮನಸ್ಸಿನಲ್ಲಿ ಇರುವ ಮಾನವೀಯತೆ, ಸಹಾನುಭೂತಿ ಮತ್ತು ಸೇವಾ ಮನೋಭಾವ ರಾಜಕೀಯದಲ್ಲಿ ಅಪರೂಪ. ಇಂತಹ ನಾಯಕರು ಸಮಾಜಕ್ಕೆ ಅಗತ್ಯ. ಅವರು ಇನ್ನೂ ಉನ್ನತ ಸ್ಥಾನಗಳಿಗೆ ಏರಿ ಸಮಾಜ ಸೇವೆಯನ್ನು ಇನ್ನಷ್ಟು ವಿಸ್ತರಿಸಲಿ. ಅವರ ಸಾಧನೆಯ ಪಯಣ ಹೀಗೆ ಮುಂದುವರಿಯಲಿ," ಎಂದು ಹಾರೈಸಿದರು.



ಸನ್ಮಾನ ಸ್ವೀಕರಿಸಿ ಮಾತನಾಡಿದ ಉಪಾಧ್ಯಕ್ಷರಾದ ಹುಸೇನ್ ಬಾಷಾ ಬೂದುಗುಂಪ ಅವರು ಭಾವೋದ್ರಿಕ್ತವಾಗಿ ಪ್ರತಿಕ್ರಿಯಿಸಿ, "ನಮ್ಮ ಆತ್ಮೀಯ ಸಹೋದರರಾದ ಇರ್ಫಾನ್ ಕೆ ಹಾಗೂ ಅವರ ಜೊತೆಗಿನ ಎಲ್ಲರು ಇಂದು ನಮ್ಮ ಮನೆಗೆ ಬಂದು ನನಗೆ ನೀಡಿದ ಈ ಗೌರವ, ಪ್ರೀತಿ ಮತ್ತು ಆಶೀರ್ವಾದ ನನ್ನ ಜೀವನದಲ್ಲಿ ಮರೆಯಲಾರದ ಕ್ಷಣವಾಗಿದೆ. ನಿಮ್ಮಂತಹ ಆತ್ಮೀಯರ ಬೆಂಬಲವೇ ನನ್ನ ಶಕ್ತಿ. ಈ ಸನ್ಮಾನ ನನ್ನ ಮೇಲೆ ಇನ್ನಷ್ಟು ಜವಾಬ್ದಾರಿಯನ್ನು ಹೆಚ್ಚಿಸಿದೆ," ಎಂದು ಹೇಳಿದರು. ಅವರು ಮುಂದುವರೆದು, "ನಾನು ಈ ಸ್ಥಾನವನ್ನು ಒಂದು ಗೌರವವಾಗಿ ಮಾತ್ರವಲ್ಲ, ಸೇವೆಯ ಅವಕಾಶವಾಗಿ ನೋಡುತ್ತೇನೆ.

ಬಡವರ ಕಣ್ಣೀರು ಒರೆಸುವ ಕೆಲಸ, ನಿರ್ಗತಿಕರಿಗೆ ನೆರವಾಗುವ ಕಾರ್ಯ, ಸಮಾಜದ ಅಭಿವೃದ್ಧಿಗೆ ಶ್ರಮಿಸುವುದು ನನ್ನ ಮುಖ್ಯ ಗುರಿ. ನಿಮ್ಮ ವಿಶ್ವಾಸಕ್ಕೆ ತಕ್ಕಂತೆ ಕೆಲಸ ಮಾಡಿ ಸಮಾಜದ ಋಣ ತೀರಿಸಲು ಸದಾ ಪ್ರಯತ್ನಿಸುತ್ತೇನೆ. ನೀವು ತೋರಿದ ಪ್ರೀತಿ ಮತ್ತು ನಂಬಿಕೆ ನನ್ನನ್ನು ಇನ್ನಷ್ಟು ಸೇವೆಯ ದಾರಿಗೆ ಮುನ್ನಡೆಯಲು ಪ್ರೇರೇಪಿಸುತ್ತದೆ," ಎಂದು ಮನದಾಳದ ಮಾತುಗಳನ್ನು ಹಂಚಿಕೊಂಡರು.ಈ ಸಂದರ್ಭದಲ್ಲಿ ಸನ್ ರೈಸ್ ಕಾಲೇಜಿನ ಅಧ್ಯಕ್ಷರಾದ ಇರ್ಫಾನ್ ಕೆ, ಮತ್ತಣ್ಣ, ಮಹಮ್ಮದ್, ಇಸಾಕ್, ಸಮೀರ್, ಉಮೇರ, ಅಲಿ, ಮೂಸಾ, ಅಫ್ಮಾನ್, ರಿಯಾಜ್, ದಾವುದ್ ಸೇರಿದಂತೆ ಅನೇಕರು ಉಪಸ್ಥಿತರಿದ್ದು, ಶುಭಾಶಯಗಳನ್ನು ಅರ್ಪಿಸಿದರು. ಕಾರ್ಯಕ್ರಮವು ಆತ್ಮೀಯತೆ, ಸ್ನೇಹ ಹಾಗೂ ಭಾವೈಕ್ಯತೆಯ ಸಂಕೇತವಾಗಿ ಮೂಡಿಬಂದಿತು.

## ನೇಮಕಾತಿ ಪ್ರಕಟಣೆ

ಆದಾಯ ತೆರಿಗೆ ಇಲಾಖೆ ನೇಮಕಾತಿ 2026–10 ಕಾನೂನು ಸಲಹೆಗಾರರು, ಯುವ ವೃತ್ತಿಪರರ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಆದಾಯ ತೆರಿಗೆ ಇಲಾಖೆ ನೇಮಕಾತಿ 2026: 10 ಕಾನೂನು ಸಲಹೆಗಾರರು, ಯುವ ವೃತ್ತಿಪರರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಆದಾಯ ತೆರಿಗೆ ಇಲಾಖೆಯು ಮಾರ್ಚ್ 2026 ರ ಆದಾಯ ತೆರಿಗೆ ಇಲಾಖೆಯ ಅಧಿಕೃತ ಅಧಿಸೂಚನೆಯ ಮೂಲಕ ಕಾನೂನು ಸಲಹೆಗಾರರು, ಯುವ ವೃತ್ತಿಪರರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ದೆಹಲಿ – ನವದೆಹಲಿ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 13–ಏಪ್ರಿಲ್–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 19–03–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 13–ಏಪ್ರಿಲ್–2026 ಅಧಿಕೃತ ವೆಬ್‌ಸೈಟ್: incometax.gov.in

### ಬೇಸಿಗೆಯ ಪ್ರಖರ ಬಿಸಿಲಿನಿಂದ ನವಜಾತ ಶಿಶು, ಗರ್ಭಿಣಿ, ಬಾಣಂತಿ, ಸೇರಿದಂತೆ ವಯೋವೃದ್ದರ ಸುರಕ್ಷತೆಯ ಖಾಳಜಿಗೆ ಆಧ್ಯತೆ ನೀಡಿ: ಡಾ ಸುರೇಂದ್ರಬಾಬು

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಪ್ರಸ್ತುತ ವರ್ಷದ ಬೇಸಿಗೆಯು ಪ್ರಖರವಾಗಿರುವ ಸಾಧ್ಯತೆಗಳ ಬಗ್ಗೆ ವರದಿ ಹಿನ್ನಲೆಯಲ್ಲಿ ಮುಖ್ಯವಾಗಿ ಚಿಕ್ಕ ಮಕ್ಕಳು, ಗರ್ಭಿಣಿ, ಬಾಣಂತಿಯರು, ವಯೊವೃದ್ದರ ಕಾಳಜಿಗಾಗಿ ಕುಟುಂಬದ ಸದಸ್ಯರು ಹೆಚ್ಚಿನ ಆಧ್ಯತೆ ನೀಡಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರಬಾಬು ವಿನಂತಿಸಿದರು.**



ರಾಯಚೂರು ನಗರದ ರಾಗಿಮಾನಗಡ್ಡಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮಾವಿನಕೆರೆ ಹೆರಿಗೆ ಆಸ್ಪತ್ರೆಗೆ ಬೇಟಿ ನೀಡಿ ತಾಯಂದಿರೊಂದಿಗೆ ಮಾತನಾಡಿ, ಬಿಸಿಲಿನ ಪ್ರಖರತೆ ಹೆಚ್ಚಿರುವ ಮಧ್ಯಾನ್ಹದ 1 ಗಂಟೆಯಿಂದ 4 ಗಂಟೆಯವರೆಗೆ ಹೆಚ್ಚು ಜಾಗರೂಕರಾಗಿರಬೇಕು. ನವಜಾತ ಶಿಶುವಿನ ಕಾಳಜಿ: ಹೆರಿಗೆ ನಂತರ ಬಾಣಂತಿಯರು ನವಜಾತ ಶಿಶುವಿಗೆ ಮೇಲಿಂದ ಮೇಲೆ ಎದೆ ಹಾಲುಣಿಸುವ ಮೂಲಕ ಶಿಶುವಿನಲ್ಲಾಗುವ ನಿರ್ಜಲೀಕರಣ ತಡೆಯಲು ಸಹಕಾರಿಯಾಗುವುದು. ರೋಗ ನಿರೋಧಕ ಶಕ್ತಿ ವೃದ್ದಿಸಲು 12 ಮಾರಕ ರೋಗಗಳ ವಿರುದ್ಧ ಲಸಿಕೆ ಹಾಕಿಸಲು ಮರೆಯಬಾರದು. ಗರ್ಭಿಣಿ ಬಾಣಂತಿಯರ ಆರೈಕೆ: ಪ್ರಖರ ಬಿಸಿಲಿನ ಅವಧಿಯಲ್ಲಿ ಆದಷ್ಟು ಮನೆಯ ಹೊರಗೆ ಹೋಗದಂತೆ ಮುತವರ್ಜಿ ವಹಿಸಿ. ಮನೆಯ ಒಳಗೆ ಅಥವಾ ನೆರಳು ಇರುವ ಸ್ಥಳದಲ್ಲಿ ವಿಶ್ರಾಂತಿ ಪಡೆಯಬೇಕಿದೆ. ಆದಷ್ಟು ಮಸಾಲೆಯುಕ್ತ ಪದಾರ್ಥಗಳ ಸೇವನೆ ಕಡಿಮೆ ಇರಲಿ. ವಯೊವೃದ್ದರು ಹಾಗೂ ದಿರ್ಘಾವಧಿ ಕಾಯಿಲೆಯಿಂದ ಬಳಲುವವರ ಆರೈಕೆ: ಅಧಿಕ ಬಿಸಿಲಿರುವ ಸಮಯದಲ್ಲಿ ಮನೆಯ ಹೊರಗೆ ಹೊಗದಿರಲು ಯೋಚಿಸಿ, ದೈನಂದಿನವಾಗಿ ತೆಗೆದುಕೊಳ್ಳುವ ಮಾತ್ರೆಗಳನ್ನು ಜೊತೆಯಲ್ಲಿರಿಸಿಕೊಳ್ಳಿ, ದ್ರವ ಆಹಾರ ಹೆಚ್ಚು ಸೇವಿಸಬೇಕು. ಚಿಕ್ಕ ಮಕ್ಕಳ ಆರೈಕೆಗೆ ಕಾಳಜಿ ಆಟವಾಡುವ ಮಕ್ಕಳು ಬಿಸಿಲಿನಲ್ಲಿ ನಿಲ್ಲಿಸಿರುವ ವಾಹನ ಮುಟ್ಟದಂತೆ ಜಾಗೃತಿ ವಹಿಸಬೇಕು. ಮಕ್ಕಳು ಅಸುರಕ್ಷಿತ ಆಹಾರ, ಪಾನೀಯ ಸೇವಿಸದಂತೆ ನಿಗಾವಹಿಸಿ. ಓಆರ್‌ಎಸ್ ಜೀವಜಲ ಬಳಕೆಗೆ ಆಧ್ಯತೆ ನೀಡಿ ನಿರ್ಜಲಿಕರಿಣದಿಂದ ದೇಹದ ನೀರಿನ ಅಂಶದ ಜೊತೆಗೆ ಲವಣಾಂಶ ಕಡಿಮೆಯಾಗದಂತೆ ಓಆರ್‌ಎಸ್ ಜೀವ ಜಲ ಪೊಟ್ಟಣ ಸದಾ ಮನೆಯಲ್ಲಿರಲಿ. ಒಂದು ಲೀಟರ್ ನೀರಿಗೆ ಪೊಟ್ಟಣದ ಸಂಪೂರ್ಣ ಪುಡಿ ಹಾಕಿ ದ್ರಾವಣ ಸಿದ್ದಪಡಿಸಿ 24 ಗಂಟೆಯೊಳಗೆ ಬಳಸಬೇಕು. ಇದಲ್ಲದೆ ಲಿಂಬೂ ಪಾನಕ, ಎಳೆನೀರು, ಮಜ್ಜಿಗೆ ಕುಡಿಯಬಹುದು. ಆಹಾರದಲ್ಲಿ ಬೇಳೆ ತಿಳಿ ಬಳಸಿ. ಅಲ್ಲದೆ ಮುಂಜಾಗೃತವಾಗಿ ಜಿಲ್ಲಾ ಎನ್‌ಪೋರ್ಸಮೆಂಟ್ ಅಧಿಕಾರಿ ಡಾ ಶಿವಕುಮಾರ ನಾರಾ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಜಿಲ್ಲಾ ವಿಪತ್ತು ವಿಪತ್ತು ನಿರ್ವಹಣಾ ಪ್ರಾಧಿಕಾರದ ಮಾರ್ಗಸೂಚಿಯನ್ವಯ ಆರೋಗ್ಯ ಇಲಾಖೆ ಸಿಬ್ಬಂದಿ ಎಲ್ಲ ಆಸ್ಪತ್ರೆಯ ಬರುವ ಜನತೆಗೆ, ಗ್ರಾಮಗಳಲ್ಲಿ ಹತ್ತಿ ಉಡುಪು ಬಳಕೆ, ಛತ್ರಿ, ಜೊತೆಯಲ್ಲಿ ನೀರು ಇರುವಂತೆ ಸಾರ್ವಜನಿಕರಿಗೆ ವ್ಯಾಪಕ ಪ್ರಚಾರ ಕೈಗೊಳ್ಳಲಾಗುತ್ತಿದೆ. ವಾಂತಿ ಬೇಧಿ ತಡೆ: ಬೇಸಿಗೆಯಲ್ಲಿ ಕಲುಷಿತ ನೀರಿನ ಸೇವನೆಯಿಂದ ಸಂಭಾವ್ಯ ವಾಂತಿ–ಬೇಧಿ ಪ್ರಕರಣಗಳು ಉಂಟಾಗುವ ಹಿನ್ನಲೆಯಲ್ಲಿ ಶುದ್ದೀಕರಿಸಿದ ನೀರು ಅಥವಾ ನೀರು ಶುದ್ದೀಕರಣ ಘಟಕದ ನೀರನ್ನು ಕುಡಿಯಲು ಬಳಸಬೇಕು. ಅಲ್ಲದೆ ಊಟದ ಮೊದಲು ಶೌಚದ ನಂತರ ಕೈಗಳನ್ನು ಸಾಬೂನು ಮತ್ತು ನೀರಿನಿಂದ 45 ಸೆಕೆಂಡ್‌ಗಳ ಕಾಲ ತೊಳೆದ ನಂತರ ಆಹಾರ ಸೇವಿಸಬೇಕು. ನೀರಿನ ಸಂಗ್ರಹಣಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಬೇಕು. ಸುರಕ್ಷಿತ ಆಹಾರ ಮಾತ್ರ ಸೇವಿಸಿ, ಆದಷ್ಟು ಮನೆಯಲ್ಲಿ ತಯಾರಿಸಿದ ಆಹಾರಕ್ಕೆ ಆದ್ಯತೆ ನೀಡಿರಿ, ರಸ್ತೆ ಬದಿ ತೆರೆದಿಟ್ಟ ಆಹಾರ ಪದಾರ್ಥ ಸೇವಿಸಬಾರದು, ಮಲ, ಮೂತ್ರ ವಿಸರ್ಜನೆಗಾಗಿ ಶೌಚಾಲಯ ಬಳಸಬೇಕು. ಇದಕ್ಕಾಗಿ ಜಿಲ್ಲಾ ಸರ್ವೆಕ್ಷಣಾಧಿಕಾರಿ ಡಾ ಗಣೇಶ್ ಕೆ ನೇತೃತ್ವದಲ್ಲಿ ಅಗತ್ಯ ಜಾಗೃತಿ ನೀಡಲಾಗುತ್ತಿದೆ ಎಂದರು. ಅಲ್ಲದೆ ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಮುಂಜಾಗ್ರತಾ ಔಷಧಿಗಳು ಲಭ್ಯವಿವೆ, ಯಾವುದೇ ತುರ್ತು ಸಂದರ್ಭದಲ್ಲಿ 108 ಕ್ಕೆ ಕರೆ ಮಾಡಿ ಆಯಂಬ್ಯುಲೆನ್ಸ್ ಸದುಪಯೋಗ ಪಡೆಯಲು ತಿಳಿಸಿದರು.

# ಸಂಗೀತ ಮನಸ್ಸಿಗೆ ಮಾನಸಿಕ ನೆಮ್ಮದಿ ನೀಡುತ್ತದೆ ವೆಂಕಣ್ಣ ಜೋಶಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಎಪಿಎಂಸಿ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ರಾಗ್ ಸಿಂಧು ಮ್ಯೂಸಿಕ್ ಅಕಾಡೆಮಿ ಸಿಂಧನೂರು ವತಿಯಿಂದ ಹಮ್ಮಿಕೊಂಡಿದ್ದ ಮೊದಲನೇ "ಭಕ್ತಿ ಸುಧೆ" ಕಾರ್ಯಕ್ರಮವನ್ನು ಸಂಸ್ಕಾರ ಭಾರತಿ ಅಧ್ಯಕ್ಷರಾದ ವೆಂಕಣ್ಣ ಜೋಶಿ ಇವರು ಉದ್ಘಾಟಿಸಿ ಮಾತನಾಡಿ ಸಂಗೀತ ಮನಸ್ಸಿಗೆ ಮಾನಸಿಕ ನೆಮ್ಮದಿ ನೀಡುತ್ತದೆ,**

ಜೊತೆಗೆ ನಮ್ಮ ದೇಶದ ಪರಂಪರೆ, ಸಂಸ್ಕೃತಿಯ ಕುರುಹಾದ ಸಂಗೀತವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಎಲ್ಲರ ಮೇಲಿದೆಯೆಂದರು. ಸಿಂಧನೂರಿನ ಸಂಗೀತಗಾರದ ವಿಜಯಕುಮಾರ ಜಿ ಹಿರೇಮಠ್ ಇವರು ಧಾರವಾಡದಲ್ಲಿ 7 ವರ್ಷಗಳ ಕಾಲ ಸಂಗೀತ ಅಧ್ಯಯನ ಮಾಡಿ ಪ್ರಸ್ತುತ ಸಿಂಧನೂರಿನಲ್ಲಿ ರಾಗ್ ಸಿಂಧು ಮ್ಯೂಸಿಕ್ ಅಕಾಡೆಮಿಯನ್ನು ಪ್ರಾರಂಭಿಸಿ ಸಂಗೀತ ತರಗತಿ ನಡೆಸುವುದರ ಮೂಲಕ ಬಾಲ ಸಂಗೀತ ಪ್ರತಿಭೆಗಳಿಗೆ ತರಬೇತಿ ನೀಡುತ್ತಿದ್ದಾರೆ...ತಮ್ಮಲ್ಲಿ ತರಬೇತಿ ಪಡೆದ ಮಕ್ಕಳಿಗೆ ಒಂದು ಉತ್ತಮ





ವೇದಿಕೆ ನಿರ್ಮಾಣ ಮಾಡುವ ಸಲುವಾಗಿ ಸತಃ ಇವರೇ ಪ್ರತಿ ತಿಂಗಳು ಒಂದು ದೇವಸ್ಥಾನದಲ್ಲಿ ಭಕ್ತಿ ಸುಧೆ ಕಾರ್ಯಕ್ರಮವನ್ನು ಆಯೋಜಿಸುತ್ತಿದ್ದಾರೆ,

ಈ ಕಾರ್ಯಕ್ರಮದಲ್ಲಿ ಮಕ್ಕಳೇ ಅಧ್ಭುತವಾಗಿ ಹಾಡುಗಳನ್ನು ಹಾಡುತ್ತಾರೆ, ನಂತರ ವಿಜಯಕುಮಾರ ಹಿರೇಮಠ ಇವರು ಹಾಡುತ್ತಾರೆ.. ಇವರ ಈ ಕಾರ್ಯಕ್ಕೆ ಎಲ್ಲಾ ಪೋಷಕರು ಸಹಕಾರ ನೀಡಿ ಪ್ರೋತ್ಸಾಹಿಸಿದ್ದಾರೆ.... ಸ್ವರ, ಅನಿರುದ್ಧ, ರಿತಿಕಾ, ಸಾನ್ವಿ, ನಿಸರ್ಗ ಮುದ್ದು ಪುಟಾಣಿಗಳು ತಮ್ಮ ಕಂಠ ಸಿರಿಯಿಂದ ಹಾಡುಗಳನ್ನು ಹಾಡಿ ನೆರೆದಿದ್ದ ಪ್ರೇಕ್ಷಕರ ಮನ ಗೆದ್ದರು.. ನಂತರ ಹಾಡಿದ ವಿಜಯಕುಮಾರ ಹಿರೇಮಠ್ ಇವರಿಗೆ ವಿರಾಟ್ ಬದಿ ಕೊಳಲು ವಾದನ ಸಾಥ್, ಮಹಾಂತಯ್ಯ ಗೊನವಾರ ಹಾರ್ಮೋನಿಯಂ ಸಾಥ್, ಗಣಪತಿ ಪೂಜಾರ್ ದಿನ್ನಿ ರಾಯಚೂರು ಇವರು ತಬಲಾ ಸಾಥ್ ನೀಡಿದರು.



ಸಂಗೀತ ಕಾರ್ಯಕ್ರಮಗಳಿಗೆ ಅವಕಾಶಗಳು ತುಂಬಾ ಕಡಿಮೆ ಇರುವ ಸಿಂಧನೂರಲ್ಲಿ ಇಂಥಹ ಕಾರ್ಯಕ್ರಮ ಆಯೋಜಿಸಿರಿವುದು ಒಳ್ಳೆಯ ಬೆಳವಣಿಗೆ ಮುಂದಿನ ದಿನಗಳಲ್ಲಿ ಈ ಕಾರ್ಯಕ್ರಮಗಳಿಗೆ ಸಂಗೀತ ಅಭಿಮಾನಿಗಳು ಸಹಕಾರ ನೀಡಿ ಇಂಥಹ ಗಾಯಕರನ್ನು ಪ್ರೋತ್ಸಾಹಿಸಿ ಬೆಳೆಸಬೇಕಾದದ್ದು ಅತೀ ಮಹತ್ವದ್ದು... ಕಾರ್ಯಕ್ರಮದಲ್ಲಿ ಗವಿಸಿದ್ದಯ್ಯ ಹಿರೇಮಠ್, ವಿನಾಯಕ ದೇವಸ್ಥಾನದ ಅರ್ಚಕರಾದ ಶರಣಯ್ಯ ಸ್ವಾಮಿ, ಅಮರಯ್ಯ ಸ್ವಾಮಿ ಪಾಲಕರು ಪೋಷಕರು, ಸಾರ್ವಜನಿಕರು ಉಪಸ್ಥಿತರಿದ್ದರು..

# ಸಮಾಜದಲ್ಲಿ ಶಾಂತಿ, ಏಕತೆ ಕಾಪಾಡೋಣ: ರಾಜಾ ವೆಂಕಟಪ್ಪ ನಾಯಕ



ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಈದ್ಗಾ ಮೈದಾನದ ಹತ್ತಿರ ರಂಜಾನ್ ಹಬ್ಬದ ಅಂಗವಾಗಿ ಮುಸ್ಲಿಂ ಸಮುದಾಯದವರಿಗೆ ಮಾಜಿ ಶಾಸಕ ರಾಜಾ ವೆಂಕಟಪ್ಪನಾಯಕ ಶುಭಾಶಯಗಳನ್ನು ತಿಳಿಸಿದರು.**



ಈ ಸಂದರ್ಭದಲ್ಲಿ ಮಾತನಾಡಿದ ಅವರು, ರಂಜಾನ್ ಹಬ್ಬವು ಶಾಂತಿ, ಸಹಾನುಭೂತಿ ಮತ್ತು ಸೌಹಾರ್ದತೆಯ ಪ್ರತೀಕವಾಗಿದ್ದು, ಸಮಾಜದಲ್ಲಿ ಎಲ್ಲರೂ ಒಂದಾಗಿ ಬಾಳಬೇಕೆಂಬ ಸಂದೇಶ ನೀಡುತ್ತದೆ ಎಂದು ಹೇಳಿದರು. ಇನ್ನೂ ಅವರು, ಧರ್ಮಭಾವನೆಗಳನ್ನು ಗೌರವಿಸಿ ಪರಸ್ಪರ ಸಹಕಾರದಿಂದ ಸಮಾಜದಲ್ಲಿ ಶಾಂತಿ ಮತ್ತು ಏಕತೆ ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜೆಡಿಎಸ್ ರಾಜ್ಯ ಯುವ ಘಟಕದ ಉಪಾಧ್ಯಕ್ಷ ರಾಜಾ ರಾಮಚಂದ್ರನಾಯಕ, ತಾ. ಅಧ್ಯಕ್ಷ ಡಾ. ಈರಣ್ಣ ಮರ್ಲಟ್ಟಿ, ಹೆಚ್. ಮೌನೇಶ ಗೌಡ, ಶರಣಪ್ಪ ಗೌಡ, ಬಾಷ ಸಾಬ್, ಖಲೀಲ್ ಖುರೇಷಿ, ಶರಣಪ್ಪ ಮೇದಾ, ಸುಭಾನ್ ಬೇಗ್, ಸಾಜಿದ್ ಪಾಷಾ, ಮೌಲಸಾಬ್, ಬಸವರಾಜ ಸ್ವಾಮಿ, ವಿಜಯ ನಾಯಕ ಕೊಟ್ನೆಕಲ್ ಸೇರಿದಂತೆ ಇನ್ನಿತರರು ಇದ್ದರು.

# ಅರಕೇರಾ ಪಟ್ಟಣದಲ್ಲಿ ಸಂಭ್ರಮದಿಂದ ರಂಜಾನ್ ಹಬ್ಬ ಆಚರಣೆ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ಮುಸ್ಲಿಮರ ಪವಿತ್ರ ರಂಜಾನ್ ಹಬ್ಬವನ್ನು ಪಟ್ಟಣದಲ್ಲಿ ಶನಿವಾರ ಶ್ರದ್ಧಾ ಮತ್ತು ಭಕ್ತಿಯಿಂದ ರಂಜಾನ ಹಬ್ಬ ಆಚರಣೆಮಾಡಿದರು. ಶುಕ್ರವಾರ ಆಗಸದಲ್ಲಿ ಚಂದ್ರ ಗೋಚರಿಸಿದ ತರುವಾಯ ಕಳೆದ ಮೂವತ್ತು ದಿನಗಳ ಕೈಗೊಂಡಿದ್ದ ಉಪವಾಸ ಅಂತ್ಯಗೊಳಿಸಿದರು.**

ಮುಂಜಾನೆಯಿಂದಲೇ ಹೊಸ ಬಟ್ಟೆಗಳನ್ನು ತೊಟ್ಟು ಮಕ್ಕಳು. ಹಿರಿಯರು ಜಾಮೀಯ ಮಸೀದಿ ಸೇರಿದಂತೆ ಪಟ್ಟಣದಲ್ಲಿನ 3 ಮಸೀದಿಯಲ್ಲಿ ವಿಶೇಷಪ್ರಾರ್ಥನೆ ಸಲ್ಲಿಸಿದರು.ನಂತರ ಸಾವಿರಾರು ಮುಸ್ಲಿಮರು ಪಟ್ಟಣದ ಹೊರವಲಯದಲ್ಲಿನ ಈದ್ಗಾ ಮೈದಾನಕ್ಕೆ ಹೋಗಿ ಸಾಮೂಹಿಕ ಪ್ರಾರ್ಥನೆ ನೆರವೇರಿಸುವ ಮೂಲಕ ರಂಜಾನ್ ಆಚರಣೆಮಾಡಿದರು. ಮುಸ್ಲಿಂ ಧರ್ಮಗುರು ಅಲಿಂಖಾಜಿ, ಹಾಫಿಜ್ ಬಾಷಸಾಬ



ಇಸ್ಲಾಂ ದಾರ್ಮಿಕ ಉಪದೇಶ ನೀಡಿದರು. ಜಾಮೀಯಾ ಮಸೀದಿ ಅಧ್ಯಕ್ಷ ಜಲೀಲಾಸಾಬ ಸೇರಿದಂತೆ ಸಮಾಜದ ಬಾಂದವರು ಉಪಸ್ಥಿತರಿದ್ದರು.

ನಂತರ ಬಡಮುಸ್ಲಿಮರಿಗೆ ಬಟ್ಟೆ,ಆಹಾರಸಾಮಾಗ್ರಿ ,ಹಣವನ್ನು ದಾನವಾಗಿ ನೀಡುವ ಮೂಲಕ ಹಬ್ಬವನ್ನು ಆಚೆರಣೆ ಮಾಡುವದು ಪಟ್ಟನದಲ್ಲಿ ಕಂಡುಬಂದಿತು. ಪಟ್ಟಣದಲ್ಲಿನ ಹಿರಿಯ ಮುಖಂಡರಾದ ಸತ್ಯನಾರಾಯಣನಾಯಕ ಮಾಜಿ ಜಿಲ್ಲಾಪಂಚಾಯತ ಸದಸ್ಯರ ನಿವಾಸದಲ್ಲಿ ಮುಸ್ಲಿಂ ಗುರುಗಳಾದ ಅಲಿಂಖಾಜಿಯವರಿಗೆ ಬಾಷಸಾಬ ಹಾಪಿಸಾಬ ಇಬ್ಬರನ್ನು ಸನ್ಮಾನಿಸಿಗೌರವಿಸಿ ವಿಳ್ಯೆಬಾಬತ್ತು ನೀಡಿ ಸತ್ಕಾರಿಸಲಾಯಿತು.ಅರಕೇರಾ ಪಟ್ಟಣದ ಈದ್ಗಾ ಮೈದಾನದಲ್ಲಿ ಅಗ್ರಹಾರ, ನಾಗೋಲಿ, ಪಿಲಿಗುಂಡ, ಭೂಮನಗುಂಡ, ಆಲ್ಕೋಡ ಗ್ರಾಮಸ್ಥರು ಸಾಮಾಹಿಕ ಪ್ರಾರ್ಥನೆ ಸಲ್ಲಿಸಿದರು. ಪಟ್ಟಣದಲ್ಲಿನ ಮಾಜಿವ ಸಚಿವರಾದ ಕೆ,ಶಿವನಗೌಡನಾಯಕ,

ಆರ್ ಡಿಸಿ ಬ್ಯಾಂಕ್ ನಿರ್ದೇಶಕರಾದ ಎ. ರಾಜಶೇಖರನಾಯಕ, ಕೆ.ಅನಂತರಾಜನಾಯ, ಮಾಜಿ ಗ್ರಾಮ ಪಂಚಾಯತ ಅಧ್ಯಕ್ಷರು ಹಾಲಿ ಸದಸ್ಯರು ತಿಮ್ಮಪ್ಪನಾಯಕ ಪೋಲಿಸ್ ಪಾಟೀಲ್. ಕಲ್ಪವೃಕ್ಷ ಸ,ಪ.ಸಂಘ ಅಧ್ಯಕ್ಷರಾದ ಬಸವರಾಜಪೂಜಾರಿ ಸೇರಿದಂತೆ ಪಟ್ಟಣದಲ್ಲಿನ ಪ್ರಮುಖ ಮುಖಂಡರುಗಳ ಮನೆಗೆ ತೆರಳಿ ಪಟ್ಟಣದಲ್ಲಿ ಶುಭಾಶಯವಿನಿಮಯ ಮಾಡಿಕೊಂಡರು.ಈದ್ಗಾ ಮೈದಾನದಲ್ಲಿ ದೇವದುರ್ಗ ಪೋಲಿಸ್ ಅಧಿಕಾರಿಗಳಾದ ವಿರೇಶ,ಹನುಮೇಶ ಬಂದೋಬಸ್ತೇರ್ಪಡಿಸಿದರು.

# ಮಾನವಿ ಸಂಭ್ರಮಾಚರಣೆಯಿಂದ ರಂಜಾನ್ ಹಬ್ಬ ಆಚರಣೆ

ನೈಜ್ಯ ದೆಸೆ ನ್ಯೂಸ್

**ಮಾನವಿ: ಮಾನ್ವಿ ವಿಧಾನಸಭಾ ಕ್ಷೇತ್ರದ ಮಾನ್ವಿ ನಗರದಲ್ಲಿ ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ಈದ್ಗಾ ಮೈದಾನದ ಮುಂಭಾಗದಲ್ಲಿ ನಡೆದ ಈದ್ ಸಂಭ್ರಮ ಭಕ್ತಿಭಾವ, ಸಂತೋಷ ಮತ್ತು ಸಹೋದರತ್ವದ ವಾತಾವರಣದಲ್ಲಿ ನೆರವೇರಿತು. ಬೆಳಗಿನ ನಮಾಜ್ ನಂತರ ಮುಸ್ಲಿಂ ಬಾಂಧವರು ಪರಸ್ಪರ ಅಪ್ಪಿಕೊಂಡು "ಈದ್ ಮುಬಾರಕ್" ಎಂದು ಶುಭಾಶಯ ವಿನಿಮಯ ಮಾಡಿಕೊಂಡರು.**

ಈ ಸಂದರ್ಭದಲ್ಲಿ ಶಾಸಕ ಜಿ. ಹಂಪಯ್ಯ ನಾಯಕ್ ಸಾಹುಕಾರ್ ಅವರು ಮಾತನಾಡಿ, ರಂಜಾನ್ ಹಬ್ಬವು ತ್ಯಾಗ, ಸಹನೆ ಮತ್ತು ದಾನ



ಧರ್ಮಗಳ ಮಹತ್ವವನ್ನು ಸಾರುವ ಮಹತ್ತರ ಹಬ್ಬವಾಗಿದ್ದು, ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಒಗ್ಗಟ್ಟನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು. ಎಲ್ಲ ಸಮುದಾಯದ ಜನರು ಒಂದಾಗಿ ಹಬ್ಬವನ್ನು ಆಚರಿಸುತ್ತಿರುವುದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯವಾಗಿದ್ದು, ಇದು ನಮ್ಮ ದೇಶದ ಏಕತೆಯ ಪ್ರತೀಕ ಎಂದು ಅವರು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಸಚಿವ ಎನ್–ಎಸ್ ಬೋಸರಾಜು , ಸಂಸದ ಕುಮಾರ್ ನಾಯಕ್, ಹಾಗೂ ವಿವಿಧ ರಾಜಕೀಯ, ಸಾಮಾಜಿಕ ಮುಖಂಡರು ಹಾಗೂ ಗಣ್ಯರು ಭಾಗವಹಿಸಿ ಹಬ್ಬದ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಅಬ್ದುಲ್ ಗಫೂರ್ ಸಾಬ್, ಪಂಚ ಗ್ಯಾರಂಟಿಗಳ ಅಧ್ಯಕ್ಷರಾದ ಬಿಕೆ ಅಂಬರೇಶಪ್ಪ ವಕೀಲರು, ತಾಲೂಕ ದಂಡಾಧಿಕಾರಿಗಳಾದ ಭೀಮರಾಯ ರಾಮಸಮುದ್ರ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಸಿದ್ದರಾಮಯ್ಯ ನೀರ್ (ಮಾನ್ವಿ), ಎ. ಬಾಲಸ್ವಾಮಿ ಕೊಡಲಿ, ಗೌಡ್ರು ಮಹಾಂತೇಶ್ ಸ್ವಾಮಿ, ಶಾಸಕರ ಸುಪುತ್ರರಾದ ಶಿವರಾಜ್ ನಾಯಕ ವಕೀಲರು, ರಾಜ ಸುಭಾಷ್ ಚಂದ್ರ ನಾಯಕ್, ರಾಜಶೇಖರ್ ಪಾಟೀಲ್ ಜಾನೇಕಲ್, ರೇವಣಸಿದ್ದಯ್ಯ ಸ್ವಾಮಿ, ಹುಸೇನಪ್ಪ ಜಗಲಿ, ಡಿ. ರಾಮಕೃಷ್ಣ, ಶಂಕರ್ ಜಗಲಿ, ರವಿ ಪುಟ್ಟಿ, ಪ್ರವೀಣ್ ಕುಮಾರ್, ಪ್ರೀತಮ್ ಕೊಡ್ಲಿ, ಚಂದ್ರಶೇಖರ್ ಕಾಜಗಾರ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಹಬ್ಬದ ಸಂದರ್ಭದಲ್ಲಿ ಸಿಹಿತಿಂಡಿಗಳನ್ನು ಹಂಚಿಕೊಳ್ಳಲಾಗಿದ್ದು, ಎಲ್ಲರೂ ಪರಸ್ಪರ ಸ್ನೇಹಭಾವದಿಂದ ಒಂದಾಗಿ ಹಬ್ಬವನ್ನು ಆಚರಿಸಿದರು. ಈದ್ ಹಬ್ಬವು ಧರ್ಮಗಳ ಮಧ್ಯೆ ಪ್ರೀತಿ, ನಂಬಿಕೆ ಮತ್ತು ಬಾಂಧವ್ಯವನ್ನು ಬಲಪಡಿಸುವ ಪವಿತ್ರ ಕ್ಷಣವಾಗಿ ಈ ಕಾರ್ಯಕ್ರಮವು ಎಲ್ಲರ ಮನಗಳಲ್ಲಿ ವಿಶೇಷ ಸ್ಥಾನ ಪಡೆದಿತು.

# ಜನರ ನಿದ್ದೆಗೆಡಿಸಿದ ಚಿರತೆ ಕಾಟಕ್ಕೆ ಬೆಸ್ತ ಗ್ರಾಮಸ್ಥರು ಭಯ ಹುಟ್ಟಿಸುತ್ತಿರುವ ಚಿರತೆ ದಾಳಿ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕು ಸುತ್ತಮುತ್ತಲ್ಲಿನ ಗ್ರಾಮಗಳಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು ಅದರಲ್ಲೂ ಅರಕೇರಾ ಪಟ್ಟಣದಲ್ಲಿ ಟಿಪ್ಪುಸುಲ್ತಾನ ಕಾಲೋನಿಯ ಹತ್ತಿರದಲ್ಲಿರುವ ಹನುಮಂತ್ರಾಯ ತಂದೆ ರಾಚಪ್ಪ ಜಾಗಟಗಲ್ ಇವರ ಮನೆಯ ಹಿಂದೆ ಗಿಡಕ್ಕೆ ಕಟ್ಟಿಹಾಕಿದ ಹಸುವಿನ ಕರುವನ್ನು ಬೆಳಿಗ್ಗಿನ ಜಾವ 4ಗಂಟೆಗೆ ಚಿರತೆ ಬಂದು ಕಚ್ಚಿ ರಕ್ತವನ್ನು ಕುಡಿದು ಕೊಂದ ಘಟನೆ ಅರಕೇರಾ ಪಟ್ಟಣದಲ್ಲಿ ಜರುಗಿದೆ.**


ಅರಕೇರಾ ದೇವದುರ್ಗ ಮುಖ್ಯ ರಸ್ತೆಯ ಪಕ್ಕದಲ್ಲಿರುವ ಇವರ ಮನೆಯಲ್ಲಿ ಕಟ್ಟಿಹಾಕಿರುವ ಹಸುವಿನಕರುವನ್ನು ತಿನ್ನಲು ಬಂದಾಗ ಅವರ ತಾಯಿ ಸಿದ್ದಮ್ಮ ಗಂಡ ರಾಚಪ್ಪಜಾಗಟಗಲ್ ಇವರು ಹಸುವಿನಕರು ಒದ್ದಾಡುತ್ತಿರುವದನ್ನು ಶಬ್ದವನ್ನು ಮನೆಯಿಂದ ಹೊರಗಡೆ ಬಂದು ನೋಡಿದ್ದಾಳೆ ಚಿರತೆಯು ತಿನ್ನುವದನ್ನು ನೋಡಿ ಕೂಗುತ್ತಾ ಮನೆಯೊಳಗೆ ಹೋಗಿದ್ದಾಳೆ. ಕರುವನ್ನು ಅಲ್ಲಿಗೆ ಬಿಟ್ಟು ಚಿರತೆ ಹೋಡಿಹೋಗಿದೆ. ಅಕ್ಕಪಕ್ಕದ ಜನರು ಕೂಗಿರುವ ಶಬ್ದವನ್ನು ಕೆಳಿಸಿಕೊಂಡಿರುವ ಜನರು ಮನೆಯ



ಹತ್ತಿರ ಗುಂಪು ಗುಂಪಾಗಿ ಬಂದು ನೋಡಿದದರು.

ಚಿರತೆಯ ಹೆಜ್ಜೆಗುರುತ್ತು ಕೂಡ ನೋಡಿ ಜನರು ಭಯಬೀತರಾದರು, ಇನ್ನೂ ಪಕ್ಕದಲ್ಲಿ ಎರಡು ಹಸುಗಳನ್ನು ಕಟ್ಟಿಹಾಕಿದರು ಅದೃಷ್ಟವಶಾತ್ ಅವುಗಳಿಗೆ ಯಾವುದೇ ತೊಂದರೆಯಾಗಿಲ್ಲ.ಮುಖ್ಯರಸ್ತೆಯ ಬದಿಯಲ್ಲಿ ಚಿರತೆ ಓಡಾಡಿರುವದಕ್ಕೆ ಆಂತಕ ತಂದಿದೆ ಇದಕ್ಕೆ ಅರಣ್ಯ ಇಲಾಖೆ ನಿರ್ಲಕ್ಷ?ಯ ಕಾರಣವೆಂಬ ಗಂಬೀರ ಆರೋಪವೋ ಸಾರ್ವಜನಿಕರಿಂದ ಕೇಳಿಬರುತ್ತಿದೆ. ಜಾನುವಾರುಗಳನ್ನು ತಿಂದು ಬಿಟ್ಟುಹೋದ ಮೇಲೆ ಸ್ಥಳಕ್ಕೆ ಬಂದು ಪರಿಶೀಲನೆ ಮಾಡುತ್ತಾರೆ.ಈಗಾಗಲೇ ಚಿರತೆಹಾವಳಿಗೆ ಹಸು,ನಾಯಿ ಬಲಿಯಾಗುತ್ತಿರುವದು ನಿಯಂತ್ರಣಕ್ಕೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿಲ್ಲ ಎಂದು ಸಾರ್ವಜನಿಕರು ಆಕ್ರೋಶವ್ಯಕ್ತಪಡಿಸಿದರು. ದಿನಾಂಕ10–3–2026ರಂದು ಕೆ. ಹನುಮಂತ್ರಾಯ ನಗರ ಜಮೀನಿನಲ್ಲಿ ಕಟ್ಟಿಹಾಕಿದ್ದ ಹಸುವನ್ನು ರಾತ್ರಿ ಸಮಯದಲ್ಲಿ ಚಿರತೆ ದಾಳಿ ಮಾಡಿ ತಿಂದುಹಾಕಿದೆ. ಈ ಪ್ರದೇಶದ ಸಮೀಪದಲ್ಲಿ ಗುಡ್ಡಗಾಡು ಪ್ರದೇಶವಿದ್ದು ಹಗಲು ಅಲ್ಲಿ ವಾಸಮಾಡಿ ರಾತ್ರಿ ಆಹಾರಕ್ಕಾಗಿ ಚಿರತೆ ಹೊರಗೆಡೆ ಬರುತ್ತಿದೆ.

ರಾತ್ರಿ ವೇಳೆ ಹೊಲ, ಗದ್ದೆಗಳಿಗೆ ನೀರು



ಹಾಯಿಸುವುದಕ್ಕೆ ಹೋಗಲು ಜನರು ಹೆದರುತ್ತಿದ್ದಾರೆ. ನಿಂಗನದೊಡ್ಡಿ,ಬಂಡೆಗುಡ್ಡ,ಗೋಲುಗುಡ್ಡ ಮೂರುಕಡೆ ಸೇರಿದಂತೆ ದೊಡ್ಡ ದೊಡ್ಡಬಂಡೆಗಳಲ್ಲಿ ಗವಿಗಳಿವೆ,ಹಗಲಿನ ವೇಳೆ ಈ ಗವಿಯಲ್ಲಿ ಚಿರತೆ ವಾಸಮಾಡುತ್ತದೆ,ಗುಡದ ಸಮೀಪದಲ್ಲಿರುವ ಜಮ್ಮೀನಿನಲ್ಲಿ ಬ್ಯಾರಗಳಲ್ಲಿ ಜಾನುವಾರುಗಳಿಗೆ ಕುಡಿಯಲು ತುಂಬಿಟ್ಟ ನೀರನ್ನುಕುಡಿದು ಚಿರತೆ ಕೂಡಿದುಹೋಗುತ್ತದೆ ಎಂದು ತೀಳಿದು ಬಂದಿದೆ. ಅರಕೇರಾ ಪಟ್ಟಣದಲ್ಲಿ ಸ್ಥಳ ಪರಿಶೀಲನೆ ನಡೆಸಿ ಹೈಅಲರ್ಟ ಘೋಷಿಸಿದ್ದಾರೆ ದೇವದುರ್ಗ ಪ್ರಾದೇಶಿಕ ಅರಣ್ಯ ವಲಯದ ಅರಣ್ಯ ಅಧಿಕಾರಿ ಮಹ್ಮದ ಅಲ್ಲಾವುದ್ದಿನ ನೇತೃತ್ವದ ಜನ ತಂಡವು ಪ್ರದೇಶವನ್ನು ಪರಿಶೀಲಿಸಿದ್ದು ಚಿರತೆ ಸೆರೆ ಹಿಡಿಯಲು ಈಗಾಗಲೇ ಬೋನ್ ಮತ್ತು ಕ್ಯಾಮೆರಾ ಟ್ರಾಪ್ ಗಳನ್ನು ಅಳವಡಿಸಲಾಗಿದೆ,

ಮುಂಜಾಗೃತಾ ಕ್ರಮವಾಗಿ ಸಾರ್ವಜನಿಕರು ರೈತರು ಜಮ್ಮೀನಿನಲ್ಲಿ ರಾತ್ರಿ ಸಮಯದಲ್ಲಿ ಒಬ್ಬೊಬ್ಬರಾಗಿ ತಿರುಗಾಡಬಾರದು ಎಂದು ತಿಳಿಸಿದ್ದಾರೆ. 4ಚಿರತೆ ಸೆರೆಗೆ ಬೋನುಗಳನ್ನು ಇರಿಸಿ ಕಾರ್ಯಪಡೆಯನ್ನು ರಚಿಸಿದ್ದೇವೆ ಜನರು ಭಯಪಡುವ ಬದಲು ಮುಂಜಾಗೃತಾ ಕ್ರಮಗಳನ್ನು ಪಾಲಿಸಿ,ಜೀವ ಹಾನಿಯಾಗುವುದನ್ನು ತಪ್ಪಿಸಲು ಅರಣ್ಯ ಇಲಾಖೆಯಯೊಂದಿಗೆ ಸಹಕರಿಸಬೇಕು.ಎಂದು ತಿಳಿಸಿದ್ದಾರೆ. ಸಂದರ್ಭದಲ್ಲಿ ಅರಣ್ಯವನಪಾಲಕರಾದ ಗುದ್ದಪ್ಪ, ಸಂಗಪ್ಪ, ಹುಸೇನಬಾಷ, ಬಾಬು ಪಟ್ಟಣದ ನಿವಾಸಿಗಳಾದ ಮಂಜುನಾಥ ಗೌಡ,ಶಿವಗೇನಿ ಗುಜಪು, ವಿರೇಶಬೇರಿ,ರಂಗಪ್ಪಗಾಲಿ, ಸಾಬಣ್ಣನಾಯಕ ಮದಕಲ್, ಹನುಮಣ್ಣಗರ?ನಮೆಂಟ್, ಸುರೇಶಗೌಡ, ವೆಂಕಟೇಶಗೌಡ, ಅಮರೇಶಬೋವಿ, ನಾಗೇಶ, ವೆಂಕಟೇಶಸರಗಿನ,ಶಿವರಾಜ ಪಿ,ಹನುಮಂತ್ರಾಯ ಜಾಗಟಗಲ್ ಮುಂತಾದವರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್

ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ (ಅಖಇ) 4 ವರ್ಷಗಳ ಪದವಿ ಕೋರ್ಸ್ ಆಗಿದ್ದು, ಕಂಪ್ಯೂಟರ್ ಸಿಸ್ಟಮ್‌ಗಳು, ಸಾಫ್ಟ್‌ವೇರ್ ಅಭಿವೃದ್ಧಿ, ಪ್ರೋಗ್ರಾಮಿಂಗ್ ಭಾಷೆಗಳು (C, Java, Python), ಮತ್ತು ನೆಟ್‌ವರ್ಕಿಂಗ್‌ಗೆ ಸಂಬಂಧಿಸಿದ ತಾಂತ್ರಿಕ ಜ್ಞಾನವನ್ನು ನೀಡುತ್ತದೆ. ಇದು ಏಅಇಖ, ಎಇಇ ಒಚಿಟಿ ಗಳಂತಹ ಪ್ರವೇಶ ಪರೀಕ್ಷೆಗಳ ಮೂಲಕ ಪ್ರವೇಶ ಪಡೆಯಬಹುದಾದ ಅತಿ ಬೇಡಿಕೆಯ ಕೋರ್ಸ್ ಆಗಿದೆ. ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ (CSE) ಕೋರ್ಸ್ ವಿವರಗಳು: ಕೋರ್ಸ್ ಅವಧಿ: 4 ವರ್ಷಗಳು (8 ಸೆಮಿಸ್ಟರ್‌ಗಳು).ಸಿಎಂಆರ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬೆಂಗಳೂರು ಕಂಪ್ಯೂಟರ್ ವಿಜ್ಞಾನಕ್ಕಾಗಿ ಬೆಂಗಳೂರಿನ ಅತ್ಯುತ್ತಮ ಎಂಜಿನಿಯರಿಂಗ್ ಕಾಲೇಜುಗಳು ಬಿಇ । ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಬೆಂಗಳೂರಿನಲ್ಲಿರುವ ಒಂದು ಉನ್ನತ ಅಖಇ ಕಾಲೇಜು, ಗುಣಮಟ್ಟದ ತಾಂತ್ರಿಕ ಶಿಕ್ಷಣ ಮತ್ತು 100% ಉದ್ಯೋಗಾವಕಾಶವನ್ನು ನೀಡುತ್ತದೆ. ಈಗಲೇ ಅನ್ವಯಿಸಿ ಕೋರ್ಸ್ ಅವಲೋಕನ ।ಅರ್ಹತಾ ಮಾನದಂಡಗಳು। ಕೋರ್ಸ್ ರಚನೆ । ಮಾಹಿತಿ ಮತ್ತು ಡೌನ್‌ಲೋಡ್‌ಗಳು ಕೋರ್ಸ್ ಅವಲೋಕನ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಎಂದರೇನು? ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ (CSE) ಎಂಜಿನಿಯರಿಂಗ್‌ನಲ್ಲಿ ಅತ್ಯಂತ ಬೇಡಿಕೆಯ ಕೋರ್ಸ್‌ಗಳಲ್ಲಿ ಒಂದಾಗಿದೆ. CSE ಕ್ಷೇತ್ರವು ಕಂಪ್ಯೂಟರ್ ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ವಿಜ್ಞಾನವನ್ನು ಸಂಯೋಜಿಸುತ್ತದೆ. ಬೆಂಗಳೂರಿನ ಃಇ ಕಂಪ್ಯೂಟರ್ ಸೈನ್ಸ್ ಕಾಲೇಜುಗಳು ಕಂಪ್ಯೂಟರ್ ಪ್ರೋಗ್ರಾಮಿಂಗ್ ಮತ್ತು ನೆಟ್‌ವರ್ಕಿಂಗ್‌ನ ಮೂಲಭೂತ ಅಂಶಗಳನ್ನು ಕಲಿಸುತ್ತವೆ ಮತ್ತು ಹಲವಾರು ಕೋರ್ಸ್ ವಿಷಯಗಳನ್ನು ಒಳಗೊಂಡಿರುತ್ತವೆ. ಅವರು ಪ್ರೋಗ್ರಾಮಿಂಗ್ ಭಾಷೆಗಳು, ಪ್ರೋಗ್ರಾಂ ವಿನ್ಯಾಸ, ಕಂಪ್ಯೂಟೇಶನ್, ಅಲ್ಗಾರಿದಮ್‌ಗಳ ವಿನ್ಯಾಸ ಮತ್ತು ಅಭಿವೃದ್ಧಿ, ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್ ಅನ್ನು ಅಧ್ಯಯನ ಮಾಡುತ್ತಾರೆ. ಕಂಪ್ಯೂಟರ್ ಸೈನ್ಸ್ ಎಂಜಿನಿಯರ್‌ಗಳು ಕಂಪ್ಯೂಟಿಂಗ್‌ನ ಹಲವು ಅಂಶಗಳಲ್ಲಿ ತೊಡಗಿಸಿಕೊಂಡಿದ್ದಾರೆ, ವೈಯಕ್ತಿಕ ಮೈಕ್ರೋಪ್ರೊಸೆಸರ್‌ಗಳು, ಪರ್ಸನಲ್ ಕಂಪ್ಯೂಟರ್‌ಗಳು ಮತ್ತು ಸೂಪರ್‌ಕಂಪ್ಯೂಟರ್‌ಗಳ ವಿನ್ಯಾಸದಿಂದ ಹಿಡಿದು ಸರ್ಕ್ಯೂಟ್ ವಿನ್ಯಾಸ ಮತ್ತು ಅವುಗಳನ್ನು ಬಲಪಡಿಸುವ ಸಾಫ್ಟ್‌ವೇರ್ ಬರೆಯುವವರೆಗೆ. ಈ 21ನೇ ಶತಮಾನದಲ್ಲಿ ಕೃತಕ ಬುದ್ಧಿಮತ್ತೆ , ಯಂತ್ರ ಕಲಿಕೆ, ಬಿಗ್ ಡೇಟಾ, ಇಂಟರ್ನೆಟ್ ಆಫ್ ಥಿಂಗ್ಸ್, ಕ್ವಾಂಟಮ್ ಕಂಪ್ಯೂಟಿಂಗ್ ಮತ್ತು ಬ್ಲಾಕ್‌ಚೈನ್‌ಗಳು ಮತ್ತು ಕಂಪ್ಯೂಟರ್ ಸೈನ್ಸ್ ಎಂಜಿನಿಯರ್‌ಗಳಂತಹ ಅತ್ಯಂತ ಪ್ರವರ್ಧಮಾನಕ್ಕೆ ಬರುತ್ತಿರುವ ಕ್ಷೇತ್ರಗಳು ಇಂದಿನ ಅಗತ್ಯವಾಗಿದೆ. ಕಂಪ್ಯೂಟರ್ ವಿಜ್ಞಾನದ ಮೂಲಕ ಉದ್ಯಮದಲ್ಲಿ ಉದ್ಯಮ 4.0 ಕ್ರಾಂತಿಯಾಗಲಿದೆ. ಅರ್ಹತೆ (Eligibility): ಪಿಯುಸಿ (ಕಗಅ/10+2) ನಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ (ಕಅಒ) ವಿಷಯಗಳೊಂದಿಗೆ ಕನಿಷ್ಠ 45–50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಪ್ರಮುಖ ವಿಷಯಗಳು (Subjects): ಪ್ರೋಗ್ರಾಮಿಂಗ್ (Programming in C++, Java, Python). ಡೇಟಾ ಸ್ಟ್ರಕ್ಚರ್ಸ್ ಮತ್ತು ಅಲ್ಗಾರಿದಮ್ಸ್ (Data Structures & Algorithms). ಆಪರೇಟಿಂಗ್ ಸಿಸ್ಟಮ್‌ಗಳು (Operating Systems). ಡೇಟಾಬೇಸ್ ಮ್ಯಾನೇಜ್‌ಮೆಂಟ್ (DBMS). ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆ (AI & Machine Learning). ಕೆಲಸದ ಅವಕಾಶಗಳು (Job Roles): ಸಾಫ್ಟ್‌ವೇರ್ ಡೆವಲಪರ್, ಸಿಸ್ಟಮ್ ಅನಾಲಿಸ್ಟ್, ವೆಬ್ ಡೆವಲಪರ್, ಡೇಟಾ ಸೈಂಟಿಸ್ಟ್, ಸೈಬರ್ ಸೆಕ್ಯುರಿಟಿ ಸ್ಪೆಷಲಿಸ್ಟ್. ಉದ್ಯೋಗ ನೀಡುವ ಪ್ರಮುಖ ಕಂಪನಿಗಳು ಭವಿಷ್ಯದ ವ್ಯಾಪ್ತಿ (Future Scope): ಐಟಿ ಕ್ಷೇತ್ರದಲ್ಲಿ ಹೆಚ್ಚಿನ ಬೇಡಿಕೆ ಮತ್ತು ಹೆಚ್ಚಿನ ವೇತನ ಪ್ಯಾಕೇಜ್ (ಲಕ್ಷಗಳಲ್ಲಿ) ಲಭ್ಯವಿದೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಈದ್ ಹಬ್ಬದಲ್ಲಿ ಪ್ರೀತಿ?ಸೌಹಾರ್ದತೆಯ ಸಂದೇಶ: ಮುದ್ದೇಬಿಹಾಳದಲ್ಲಿ ಭಕ್ತಿಭಾವದ ನಮಾಜ್

❏ ನೈಜ್ಯ ದೆಸೆ ನ್ಯೂಸ್

**ಮುದ್ದೇಬಿಹಾಳ: ಪಟ್ಟಣದ ತಾಳಿಕೋಟೆ ರಸ್ತೆಯ ಈದ್ಗಾ ಮೈದಾನದಲ್ಲಿ ರಮಜಾನ್ ತಿಂಗಳ ಅಂಗವಾಗಿ ಈದ್ ಉಲ್ ಫಿತ್ರ್ ಹಬ್ಬದ ವಿಶೇಷ ನಮಾಜ್ ಭಕ್ತಿಭಾವದಿಂದ ನೆರವೇರಿತು. ತಾಲೂಕು ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಮುಸ್ಲಿಂ ಬಾಂಧವರು ಆಗಮಿಸಿ, ಶಾಂತಿ, ಸೌಹಾರ್ದತೆ ಮತ್ತು ಭಕ್ತಿಯ ವಾತಾವರಣದಲ್ಲಿ ನಮಾಜ್ ಸಲ್ಲಿಸಿದರು.**

ಬೆಳಗ್ಗಿನ ಜಾವದಿಂದಲೇ ಈದ್ಗಾ ಮೈದಾನದಲ್ಲಿ ಜನಸಂದಣಿ ಹೆಚ್ಚಾಗಿ, ಹಬ್ಬದ ಸಂಭ್ರಮ ಕಂಗೊಳಿಸುತ್ತಿತ್ತು. ನಮಾಜ್ ನಂತರ ಜಾಮಿಯಾ ಮಸೀದಿಯ ಇಮಾಮ್ ಹಾಗೂ ಖತೀಬ್ ಮೌಲಾನಾ ಮುಫ್ತಿ ಅಫ್ತಾಬ್ ಆಲಂ ಮಾತನಾಡಿ, ಸಮಾಜದ ಏಕತೆ ಮತ್ತು ಪ್ರಗತಿಯ ಮಹತ್ವವನ್ನು ವಿವರಿಸಿದರು. ಈದ್ ಹಬ್ಬವು ಕೇವಲ ಆಚರಣೆಯಲ್ಲ, ಪ್ರೀತಿ, ಸಹೋದರತ್ವ ಮತ್ತು ವೈಷಮ್ಯಗಳನ್ನು ದೂರ ಮಾಡುವ ಸಂದೇಶ ಸಾರುವ ಹಬ್ಬವಾಗಿದೆ ಎಂದು ಹೇಳಿದರು. ಇಂದಿನ ಸಮಾಜ ಒಳಜಗಳಗಳಿಂದ ಬಳಲುತ್ತಿರುವುದು ವಿಷಾದನೀಯ ಸಂಗತಿ. ದೊಡ್ಡ ಸಮಸ್ಯೆಗಳನ್ನು ಎದುರಿಸುವ ಮೊದಲು ಕುಟುಂಬ ಹಾಗೂ ಸಮುದಾಯದ ಒಳಗಿನ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವುದು ಅಗತ್ಯ ಎಂದು ಅವರು ಕರೆ ನೀಡಿದರು.



ಶಿಕ್ಷಣದ ಪ್ರಾಮುಖ್ಯತೆಯನ್ನು ಉಲ್ಲೇಖಿಸಿದ ಅವರು, ಪೋಷಕರು ಮಕ್ಕಳಿಗೆ ಧಾರ್ಮಿಕ ಶಿಕ್ಷಣದ ಜೊತೆಗೆ ಪ್ರಪಂಚಿಕ ಶಿಕ್ಷಣವನ್ನೂ ನೀಡಬೇಕು ಎಂದು ಸಲಹೆ ನೀಡಿದರು. ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಜಕಾತ್ ಸೇರಿದಂತೆ ವಿವಿಧ ನೆರವುಗಳ ಮೂಲಕ ಉತ್ತೇಜನ ನೀಡಲು ಸ್ಥಳೀಯ ಮಟ್ಟದಲ್ಲಿ ಸಮಿತಿಗಳನ್ನು ರಚಿಸುವ ಅಗತ್ಯವಿದೆ ಎಂದರು. ಶಿಕ್ಷಣದ ಕೊರತೆಯಿಂದ ಸಮುದಾಯದ ಪ್ರತಿನಿಧಿತ್ವ ಕುಂಠಿತವಾಗಿರುವುದನ್ನು ಉಲ್ಲೇಖಿಸಿ, ಹೆಚ್ಚಿನ ವಿದ್ಯಾವಂತರಾದರೆ ಸಮಾಜದ ಸಮಸ್ಯೆಗಳಿಗೆ ಸಮರ್ಪಕ ಧ್ವನಿ ದೊರೆಯುತ್ತದೆ ಎಂದು ಹೇಳಿದರು.



ಕೊನೆಯಲ್ಲಿ ಅವರು ಪ್ರಾರ್ಥನೆ ಸಲ್ಲಿಸಿ, ಸಮಾಜದಲ್ಲಿ ಶಾಂತಿ, ಏಕತೆ ನೆಲೆಸಲಿ ಹಾಗೂ ಸನ್ಮಾರ್ಗದಲ್ಲಿ ಎಲ್ಲರೂ ಸಾಗಲಿ ಎಂದು ಹಾರೈಸಿದರು. ನಮಾಜ್ ನಂತರ ಪರಸ್ಪರ ಈದ್ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡು, ಹಿರಿಯರು, ಯುವಕರು ಹಾಗೂ ಮಕ್ಕಳು ಹಬ್ಬದ ಸಂಭ್ರಮವನ್ನು ಹಂಚಿಕೊಂಡರು. ಕಾರ್ಯಕ್ರಮವು ಶಾಂತಿಯುತವಾಗಿ ನೆರವೇರಿತು.

# ಇಂದು ಉಚಿತ ಆರೋಗ್ಯ ತಪಾಸಣಾ ಮಹಾ ಶಿಬಿರ

❏ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಕೊಣ್ಣೂರ ಗ್ರಾಮದಲ್ಲಿ ಅಸ್ಕಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಬಾಗಲಕೋಟ ಹಾಗೂ ಬಿ.ಎಸ್.ಪಾಟೀಲ ಫೌಂಡೇಶನ್ (ಸಾಸನೂರ) ಇವರ ಸಹಯೋಗದಲ್ಲಿ ಹಮ್ಮಿಕೊಂಡ ಉಚಿತ ಆರೋಗ್ಯ ತಪಾಸಣಾ ಮಹಾ ಶಿಬಿರ ಇಂದು(ಮಾ.22) ಬೆಳಿಗ್ಗೆ 9:00 ರಿಂದ ಮಧ್ಯಾಹ್ನ 3ರವರೆಗೆ ನಡೆಯಲಿದೆ.**

ಸದರಿ ಶಿಬಿರದಲ್ಲಿ ಜನರಲ್ ಮೆಡಿಸನ್, ಸಕ್ಕರೆ ಕಾಯಿಲೆ, ಬಿಪಿ ಥೈರಾಯ್ಡ್, ಹೃದಯ ದೌರ್ಬಲ್ಯ ಚಿಕಿತ್ಸೆ, ಹೃದಯನಾಳು ಬ್ಲಾಕ್ ಸಲಹೆ, ಸ್ತ್ರೀ ರೋಗ ಹಾಗೂ ಪ್ರಸೂತಿ ಹೆರಿಗೆ ಬಂಜೆತನ, ಗರ್ಭಾಶಯ ತೆರವು ಶಸ್ತ್ರಚಿಕಿತ್ಸೆ, ಎಲಬು ಮತ್ತು ಕೀಲು, ಚಿಕ್ಕ ಮಕ್ಕಳ




ಚಿಕಿತ್ಸೆ, ಮೂಗು ಕಿವಿ ಮತ್ತು ಗಂಟಲು ಚಿಕಿತ್ಸೆ, ಮೂತ್ರಪಿಂಡಕ್ಕೆ ಸಂಬಂಧಿಸಿದ ರೋಗಗಳ ಹಾಗೂ ಇನ್ನಿತರ ರೋಗಗಳ ತಪಾಸಣೆ ನಡೆಸಿ ಔಷಧಿಗಳನ್ನು ವಿತರಿಸಲಾಗುವುದು ಹಾಗೂ ಹೆಚ್ಚಿನ ಶಸ್ತ್ರ ಚಿಕಿತ್ಸೆಗೆ ಆಯ್ಕೆಯಾದವರನ್ನು ಉಚಿತವಾಗಿ ಶಸ್ತ್ರ ಚಿಕಿತ್ಸೆ ಮಾಡಲಾಗುವುದು.

ಈ ಶಿಬಿರದ ಉದ್ಘಾಟನಾ ಸಮಾರಂಭವು ಮುಂಜಾನೆ 9:00 ಘಂಟೆಗೆ ಕೊಣ್ಣೂರ ಗ್ರಾಮದ ಬಲವಂತ್ರಾಯ ಹಡಲಗೇರಿ ಪ್ರೌಢಶಾಲೆಯಲ್ಲಿ ನಡೆಯಲಿದ್ದು ತಾಳಿಕೋಟೆ ಶ್ರೀ ಖಾಸ್ಗತೇಶ್ವರ ಮಠದ ಪ.ಪೂ.ಸಿದ್ದಲಿಂಗ ದೇವರು ಸಾನಿಧ್ಯ ವಹಿಸುವರು.ಕೆ.ಎಸ್.ಡಿ.ಎಲ್.ಅಧ್ಯಕ್ಷ, ಶಾಸಕ ಅಪ್ಪಾಜಿ ನಾಡಗೌಡರು ಉದ್ಘಾಟಿಸುವರು. ದೇವರ ಹಿಪ್ಪರಗಿ ಮತಕ್ಷೇತ್ರ ಮಾಜಿ ಶಾಸಕ ಸೋಮನಗೌಡ ಬಿ.ಪಾಟೀಲ ಸಾಸನೂರ ಅಧ್ಯಕ್ಷತೆ ವಹಿಸುವರು.ಜಿ.ಪಂ.ಮಾಜಿ ಅಧ್ಯಕ್ಷ ಪ್ರಭುಗೌಡ ಚ.ದೇಸಾಯಿ ಮುಖ್ಯ ಅತಿಥಿಗಳಾಗಿ ಹಾಗೂ ಅಸ್ಕಿ ಫೌಂಡೇಶನ್ ಕೊಣ್ಣೂರ ಅಧ್ಯಕ್ಷ ಸಿ.ಬಿ.ಅಸ್ಕಿ ಗೌರವ ಅತಿಥಿಗಳಾಗಿ ಆಗಮಿಸಲಿದ್ದು ಕೃಷಿ ನೋಡಲ್ ಅಧಿಕಾರಿ ಮಹೇಶ ಜೋಶಿ ವಿಶೇಷ ಆಹ್ವಾನಿತರಾಗಿರುವರು.

ಡಾ. ಪ್ರೀತಿ ವಿಜಯ್ ಅಸ್ಕಿ ಎಂ.ಡಿ.(ಯುಎಸ್ ಎ)ಹಾಗೂ ಡಾ.ವಿಜಯ್ ಅಸ್ಕಿ ಹಾಗೂ ಪಾಟೀಲ ಕುಟುಂಬದ ಪ್ರಮುಖರು ಉಪಸ್ಥಿತರಿರುವರು. ಗ್ರಾಮೀಣ ಭಾಗದ ಬಡವರು ಹಾಗೂ ರೈತರಿಗೆ ಅನುಕೂಲವಾಗಲೆಂದು ಹಮ್ಮಿಕೊಂಡಿರುವ ಈ ಶಿಬಿರದ ಸದುಪಯೋಗವನ್ನು ಕೊಣ್ಣೂರ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು ಮಾಡಿಕೊಳ್ಳಬೇಕೆಂದು ಶಿಬಿರದ ನೇತೃತ್ವ ವಹಿಸಿದ ಡಾ.ಬಸವರಾಜ ಅಸ್ಕಿ (ಕೊಣ್ಣೂರ) ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿ.ಗಣೇಕಲ್ ನಲ್ಲಿ ರಂಜಾನ್ ಹಬ್ಬ ಆಚರಣೆ

❏ ನೈಜ್ಯ ದೆಸೆ ನ್ಯೂಸ್

**ಅರಕೇರಾ: ತಾಲೂಕಿನ ಬಿ.ಗಣೇಕಲ್ ಗ್ರಾಮದಲ್ಲಿ ಇಂದು ತ್ಯಾಗ ಮತ್ತು ಶಾಂತಿಯ ಸೌಹಾರ್ದತೆಯ ಪ್ರತಿಕ,ಸಹೋದರತೆ ಸಮಾನತೆ ಪರೋಪಕಾರ ಸಂದೇಶ ಸಾರುವ ಮುಸ್ಲಿಂ ಬಾಂಧವರ ಪವಿತ್ರ ಹಬ್ಬವಾದ ರಂಜಾನ ಹಬ್ಬವನ್ನು ಇಂದು ಬಿ.ಗಣೇಕಲ್ ನ ಮುಸ್ಲಿಂ ಸಮುದಾಯದವರು ಅತ್ಯಂತ ವಿಜೃಂಬಣೆಯಿಂದ ಆಚರಿಸಿದರು.**

ಮುಂಜಾನೆ ಕೇಂದ್ರ ಸ್ಥಾನ ಮಸೀದಿಯಿಂದ ಪ್ರಮುಖ ಬೀದಿಗಳಲ್ಲಿ ಧರ್ಮ ಪಠಣ ಗೀತೆಗಳನ್ನು ಜಪ ಮಾಡುತ್ತಾ ಕಾಲ್ನಡಿಗೆ ಮುಖಾಂತರ ಈದ್ಗಾವರೆಗೆ ತಲುಪಿದರು ನಂತರ ಎಲ್ಲಾ ಮುಸ್ಲಿಂ ಬಾಂಧವರಿಗೆ ಮೌಲ್ವಿಯವರಿಂದ ರಂಜಾನ್ ಹಬ್ಬವು ಮುಸ್ಲಿಮರಿಗೆ ಬದುಕಿನ ಅನೇಕ ಪಾಠಗಳನ್ನು ಕಲಿಸಿಕೊಡುತ್ತದೆ ದೇಹವನ್ನು ಹಸಿವಿಗೆ ಒಳಪಡಿಸಿ ಗೆಲ್ಲುವುದು ಇದರಿಂದ ಹಸಿವಿಗೆ ಒಳಗಾಗುವ ಬಡವರ ಸಂಕಟಗಳನ್ನು ಅರ್ಥ ಮಾಡಿಕೊಳ್ಳುವುದು ಹಾಗೂ ಈ ರಂಜಾನ್ ತಿಂಗಳಲ್ಲಿ ಉಪವಾಸ ಕೈಗೊಳ್ಳುವುದರ ಮೂಲಕ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಇದರೊಂದಿಗೆ ದುಂದು ವೆಚ್ಚಕ್ಕೆ ಕಡಿವಾಣ ಹಾಕುವುದು ಕೆಟ್ಟ ವಿಚಾರಗಳನ್ನು ಕೆಟ್ಟ ಕೆಲಸಗಳನ್ನು ಮಾಡದಿರುವುದು ಅದೆ ರೀತಿ ನಮ್ಮ




ಸುತ್ತಮುತ್ತಲೂ ಇರುವ ಎಲ್ಲ ಸರ್ವ ಧರ್ಮದ ಜನಾಂಗವನ್ನು ಸಹೋದರತ್ವದ ಭಾವನೆಯಿಂದ ಕಾಣುವುದು. ಮಾನವೀಯ ಮೌಲ್ಯಗಳನ್ನು ಬದುಕಿನುದ್ದಕ್ಕೂ ಅಳವಡಿಸಿಕೊಂಡು ಸಾಗುವುದು ರಂಜಾನ್ ಹಬ್ಬದ ಪ್ರಧಾನ ತಿರುಳಾಗಿದೆ ಎಂದು ಧರ್ಮ ಭೋಧಕರಾದ ಎಂ.ಡಿ ಮಸೂದ್ ಭೋಧನೆ ನೀಡಿದರು.

ಇಸ್ಲಾಂ ಧರ್ಮವು ಮುಖ್ಯವಾಗಿ ಐದು ಪ್ರಮುಖ ಮೂಲತತ್ವಗಳನ್ನು ಪ್ರತಿಪಾದಿಸುತ್ತದೆ. ಅವುಗಳೆಂದರೆ, ನಿರಾಕಾರನಾದ ಏಕದೇವನಲ್ಲಿ ಹಾಗೂ ಅವನ ಪ್ರವಾದಿಯಲ್ಲಿ ವಿಶ್ವಾಸವಿಡುವುದು. ದಿನದ ಐದು ಹೊತ್ತು ತಪ್ಪದೇ ನಮಾಜ್ ಮಾಡುವುದು. ಪ್ರತಿಯೊಬ್ಬ ವ್ಯಕ್ತಿ ತಾನು ವರ್ಷವಿಡೀ ದುಡಿದು ಗಳಿಸಿದ ಸ್ವತ್ತು, ಸಂಪತ್ತಿನಲ್ಲಿ ಶೇ 2.5ರಷ್ಟು ಮೊತ್ತವನ್ನು ಬಡವರಿಗೆ, ಸಾಲದಲ್ಲಿ ಮುಳುಗಿದವರಿಗೆ, ಅಸಹಾಯಕರಿಗೆ ದಾನ (ಝಕಾತ್) ಮಾಡುವುದು. ಪ್ರತಿ ವರ್ಷ ರಂಜಾನ್ ತಿಂಗಳಲ್ಲಿ ಒಂದು ತಿಂಗಳು ಉಪವಾಸ (ರೋಜಾ) ಆಚರಿಸುವುದು ಮತ್ತು ಆರ್ಥಿಕವಾಗಿ ಅನುಕೂಲತೆಗಳಿದ್ದರೆ ಬದುಕಿನಲ್ಲಿ ಒಂದು ಸಲ ಹಜ್ ಯಾತ್ರೆಯನ್ನು ಕೈಗೊಳ್ಳುವುದು.

ರಂಜಾನ್ ಇದು ವಿಶ್ವದಾದ್ಯಂತ ಇಸ್ಲಾಂ ಧರ್ಮೀಯರು ಖುಷಿಯಿಂದ ಆಚರಿಸುವ ಹಬ್ಬವಾಗಿದೆ ಕಠಿಣ ಉಪವಾಸದ ಮೂಲಕ ಎಲ್ಲರೂ ರಂಜಾನ್ ಮಾಸವನ್ನು ಬಹಳ ಶ್ರದ್ಧಾ

**ಹಿಂದೂ ಮುಸ್ಲಿಂ ಬಾವೈಕ್ಯ ಮೆರೆಯುವ ಹಬ್ಬ ರಂಜಾನ ಹಬ್ಬವಾಗಿದೆ ಈ ಹಬ್ಬವು ಎಲ್ಲಾ ಸರ್ವಧರ್ಮಿಯರಿಗೆ ದೇವರು ಒಳಿತನ್ನು ಮಾಡಲಿ ವಿಶೇಷವಾಗಿ ನಮ್ಮ ದೇಶ ಶಾಂತಿ ಸೌಹರ್ದತೆಯ ತವರುಮನೆ ದೇಶದಲ್ಲಿ ಶಾಂತಿ ನೆಲಸಲಿ ವಿಶೇಷವಾಗಿ ಕಾಲಕಾಲಕ್ಕೆ ಮಳೆ ಬೆಳೆ ಬೆಳೆಯುವ ಮೂಲಕ ರೈತರ ಬದುಕು ಹಸನಾಗಲಿ ಸಮಸ್ತ ನಾಡಿನ ಜನತೆಗೆ ರಂಜಾನ್ ಹಬ್ಬದ ಶುಭಾಷಯಗಳು. ಸಯ್ಯದಸಾಬು ಬಿ.ಗಣೇಕಲ್**

ಭಕ್ತಿಯಿಂದ ಆಚರಿಸುವ ಹಬ್ಬವಾಗಿದೆ ಎಂದು ರಂಜಾನ್ ಕುರಿತು ವಿಶೇಷ ಭೋಧನೆ ನೀಡಿದರು. ನಂತರ ಮುಸ್ಲಿಂ ಬಾಂಧವರೆಲ್ಲ ಸೇರಿ ನಮಾಜ್ ಮಾಡುವ ಮುಖಾಂತರ ವಿಶೇಷ ಪಾರ್ಥನೆ ಸಲ್ಲಿಸಿ ನಂತರ ಗ್ರಾಮದ ಸರ್ವ ಜನಾಂಗದವರಿಗೆ ಅಪ್ಪುಗೆ ನೀಡಿ ಹಸ್ತಲಾಘವ ನೀಡುವ ಮುಖಾಂತರ ರಂಜಾನ ಹಬ್ಬವನ್ನು ಆಚರಿಸಿದರು. ಈ ಸಂದರ್ಭದಲ್ಲಿ ಮುಸ್ಲಿಂ ಬಾಂಧವರಾದ ಅಹ್ಮದ ಸಾಬು ಸಯ್ಯದ ಸಾಬು ಹಮಿದ್.ಕೆ. ಎಸ್ ಜೈರುದ್ದಿನ್ ನದಿಮ್ ಸಾಬು ಸೋಫಿಸಾಬು ಸದ್ದಾಂ ಹುಸೇನ್ ನನ್ನೆಸಾಬು ಇಸ್ಮಾಯಿಲ್ ಕಮಲಸಾಬು ಕಾಸಿಂಸಾಬು ಅಬ್ದುಲ್ ಸಾಬು ಬಂದೇಸಾಬು ಹಾಜಿಸಾಬು ಅಲ್ಲಿಸಾಬು ಸದ್ದಾಂ ಹುಸೇನ್ ಹಾಗೂ ಯುವಕರು ಭಾಗವಹಿಸಿದ್ದರು.

# ಬಳಗಾನೂರಿನಲ್ಲಿ ಪವಿತ್ರ ರಂಜಾನ್ ಹಬ್ಬ ಅದ್ದೂರಿಯಾಗಿ ಆಚರಣೆ

## ಬಳಗಾನೂರ ಪಟ್ಟಣ ಪಂಚಾಯಿತಿ ನೂತನ ಉಪಾಧ್ಯಕ್ಷರಾದ ಹುಸೇನ್ ಭಾಷಾ ಬೂದುಗುಂಪಾ ರವರಿಗೆ ಭವ್ಯ ಸನ್ಮಾನ

❏ ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಮಾ.21ರಂದು ಪಟ್ಟಣದಲ್ಲಿ ಪವಿತ್ರ ರಂಜಾನ್ ಹಬ್ಬವನ್ನು ಎಲ್ಲಾ ಮುಸ್ಲಿಂ ಬಾಂಧವರು ಸೇರಿ ಅತ್ಯಂತ ಸಂಭ್ರಮ, ಶಾಂತಿ ಹಾಗೂ ಭಕ್ತಿಭಾವದಿಂದ ಅದ್ದೂರಿಯಾಗಿ ಆಚರಣೆ ಮಾಡಿದರು. ಹಬ್ಬದ ಅಂಗವಾಗಿ ಪಟ್ಟಣದ ಜಾಮಿಯಾ ಮಸೀದಿ, ಖೂಬಾ ಮಸೀದಿ ಹಾಗೂ ಶಾಹಿ ಜಾಮಿಯಾ ಮಸೀದಿಯಿಂದ ಬೆಳಿಗ್ಗೆ 9 ಗಂಟೆಗೆ ಮುಸ್ಲಿಂ ಬಾಂಧವರು ಪಾದಯಾತ್ರೆ ಮೂಲಕ ಈದ್ಗಾ ಮೈದಾನಕ್ಕೆ ತೆರಳಿ, ಬೆಳಿಗ್ಗೆ 9:30ಕ್ಕೆ ತಲುಪಿದರು.**

ನಂತರ ಮೌಲಾನಾ ಹುಸೇನ್ ಬಾಷಾ ಮುಲ್ಲಾ ಅವರ ನೇತೃತ್ವದಲ್ಲಿ ಸಮೂಹ ಪ್ರಾರ್ಥನೆ ಭಕ್ತಿಪೂರ್ವಕವಾಗಿ ನೆರವೇರಿತು. ಪ್ರಾರ್ಥನೆಯ ಬಳಿಕ ಮಾತನಾಡಿದ ಮೌಲಾನಾ ಮಹಿಮೂದ್ ಬಾಷಾ ಮುಲ್ಲಾ ಅವರು, ರಂಜಾನ್ ಹಬ್ಬದ ಮಹತ್ವವನ್ನು ವಿವರಿಸಿ, ಇದು ಕೇವಲ ಹಬ್ಬವಲ್ಲ; ಮಾನವೀಯತೆ, ಸಹಾನುಭೂತಿ, ತ್ಯಾಗ ಮತ್ತು ದಾನಧರ್ಮದ ಸಂದೇಶವನ್ನು ಸಾರುವ ಪವಿತ್ರ ಸಮಯವಾಗಿದೆ ಎಂದು ಹೇಳಿದರು. ಸಮಾಜದಲ್ಲಿ ಎಲ್ಲರೂ ಪರಸ್ಪರ ಪ್ರೀತಿ, ಸಹೋದರತ್ವ ಮತ್ತು ಕರುಣೆಯಿಂದ ನಡೆದುಕೊಳ್ಳಬೇಕು. ಬಡವರನ್ನು, ನಿರ್ಗತಿಕರನ್ನು ಮರೆಯದೆ ಅವರಿಗೆ ಸಹಾಯ ಮಾಡುವ ಮನೋಭಾವ ಬೆಳೆಸಬೇಕು ಎಂದು ಕರೆ ನೀಡಿದರು. ಧರ್ಮವು ಯಾರನ್ನೂ ಬೇರ್ಪಡಿಸುವುದಿಲ್ಲ; ಬಡ-ಶ್ರೀಮಂತ ಎಂಬ ಭೇದವಿಲ್ಲದೆ ಎಲ್ಲರನ್ನು ಒಂದೇ ಸಾಲಿನಲ್ಲಿ ನಿಲ್ಲಿಸುವ ಮಹತ್ವದ ಸಂದೇಶವನ್ನು ನೀಡುತ್ತದೆ ಎಂದು ತಿಳಿಸಿದರು.

ಅವರು ಈದ್ ಉಲ್ ಫಿತರ್ ಹಬ್ಬದ ಆಧ್ಯಾತ್ಮಿಕ ಅರ್ಥವನ್ನು ವಿವರಿಸಿ, ಉಪವಾಸದ ಮೂಲಕ ವ್ಯಕ್ತಿ ತನ್ನ ಆತ್ಮಶುದ್ಧಿಯನ್ನು ಸಾಧಿಸುತ್ತಾನೆ. ಉಪವಾಸವು ಶರೀರಕ್ಕೆ ಮಾತ್ರವಲ್ಲ, ಮನಸ್ಸಿಗೂ ನಿಯಂತ್ರಣ ನೀಡುತ್ತದೆ. ದಾನಧರ್ಮ, ಜಕಾತ್ ಹಾಗೂ ಸಹಾಯ ಮನೋಭಾವದಿಂದ ಸಮಾಜದಲ್ಲಿ ಶಾಂತಿ ಮತ್ತು ಸಮಾನತೆ ನೆಲೆಸುತ್ತದೆ ಎಂದು ಹೇಳಿದರು. ಪ್ರತಿಯೊಬ್ಬರೂ ತಮ್ಮ ನೆರೆಯವರೊಂದಿಗೆ ಪ್ರೀತಿ ಹಂಚಿಕೊಂಡು ಹಬ್ಬವನ್ನು ಆಚರಿಸಿದಾಗ ಮಾತ್ರ ಹಬ್ಬದ ಸಾರ್ಥಕತೆ ಹೆಚ್ಚುತ್ತದೆ ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಮೊನ್ನೆ ಪಟ್ಟಣ ಪಂಚಾಯಿತಿಯ ಉಪಾಧ್ಯಕ್ಷರಾಗಿ



ಆಯ್ಕೆಯಾದ ಹುಸೇನ್ ಬಾಷಾ ಬೂದಗುಂಪ ಅವರಿಗೆ ಎಲ್ಲಾ ಸಮಾಜದ ಹಿರಿಯರು, ಗಣ್ಯರು ಹಾಗೂ ಮುಖಂಡರು ಸೇರಿ ಅಭಿನಂದನೆ ಸಲ್ಲಿಸಿ ಗೌರವಿಸಿದರು.

ಮಾತನಾಡಿದ ಉಪಾಧ್ಯಕ್ಷರಾದ ಹುಸೇನ್ ಬಾಷಾ ಬೂದಗುಂಪ ಅವರು, ನಮ್ಮ ಸಮಾಜಕ್ಕೆ ಉಪಾಧ್ಯಕ್ಷ ಸ್ಥಾನ ಸಿಕ್ಕಿರುವುದು ಹೆಮ್ಮೆಯ ಸಂಗತಿ. ನನಗೆ ನೀಡಿದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತೇನೆ. ಬಡವರ, ನಿರ್ಗತಿಕರ ಸೇವೆಗೆ ಸದಾ ಸಿದ್ಧನಾಗಿದ್ದು, ನನ್ನ ಕೈಲಾದಷ್ಟು ದಾನಧರ್ಮ ಮಾಡಿ ಸಮಾಜದ ಋಣ ತೀರಿಸಲು ಪ್ರಯತ್ನಿಸುತ್ತೇನೆ ಎಂದು ಹೇಳಿದರು. ಎಲ್ಲ ವರ್ಗದ ಜನರ ಸಹಕಾರದಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವೆನೆಂದು ವಿಶ್ವಾಸ ವ್ಯಕ್ತಪಡಿಸಿದರು. ಕಾರ್ಯಕ್ರಮದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲು ಸೂಕ್ತ ಬಂದೋಬಸ್ತ್ ಒದಗಿಸಿದ ಬಳಗಾನೂರು ಪೊಲೀಸ್ ಠಾಣೆಯ ಪಿಎಸ್‌ಐ ಎರಿಯಪ್ಪ ಅವರಿಗೆ ಮುಸ್ಲಿಂ ಸಮಾಜದ ವತಿಯಿಂದ ಗೌರವ ಸನ್ಮಾನ ಮಾಡಲಾಯಿತು. ಹಾಗೆಯೇ ಸಮಾಜದ ಹಬ್ಬಗಳು ಹಾಗೂ ಧಾರ್ಮಿಕ ಕಾರ್ಯಕ್ರಮಗಳ ಸುದ್ದಿಗಳನ್ನು ನಿರಂತರವಾಗಿ ಪ್ರಸಾರ ಮಾಡಿ ಭಾವೈಕ್ಯತೆಯ ಸಂದೇಶವನ್ನು ನಾಡಿಗೆ ತಲುಪಿಸುತ್ತಿರುವ ಪತ್ರಕರ್ತರಾದ ಹನುಮೇಶ್ ಕಮ್ಮಾರ್ ಅವರಿಗೆ ಕೂಡ ಸನ್ಮಾನಿಸಿ ಕೃತಜ್ಞತೆ ಸಲ್ಲಿಸಿದರು.







ಈ ಸಂದರ್ಭದಲ್ಲಿ ಮೌಲಾನಾ ಹುಸೇನ್ ಬಾಷಾ, ಶೇಕ್ಷಾವಲಿ, ಮೌಲಾನಾ ಶಂಶಿರ ಅಲಿ, ಹಜರತಲಿ, ಯೂಸುಫ್ ಅತ್ತಾರ, ಮೌಲಾನಾ ಖಾದರ್ ಬಾಷಾ, ಮೌಲಾನಾ ಮಹಿಬೂಬ್,ಎಂಡಿ ಆಲಂಬಾಷ ಶಿಕ್ಷಕರು,ಪಟ್ಟಣ ಪಂಚಾಯತಿ ಉಪಾಧ್ಯಕ್ಷ ಹುಸೇನ್ ಬಾಷಾ, ಸನ್ ರೈಸ್ ಕಾಲೇಜು ಸಿಂಧನೂರಿನ ಅಧ್ಯಕ್ಷರಾದ ಇರ್ಫಾನ್ ಕೆ ,, ರಿಯಾಜ್ ನಾಯಕ್, ಅಬಿದಲಿ ಶಿಕ್ಷಕರು, ಹುಸೇನ್ ಬಾಷಾ ಶಿಕ್ಷಕರು,ಹಾಗೂ ಜಾಮಿಯಾ ಮಸೀದಿ, ಖೂಬಾ ಮಸೀದಿ ಮತ್ತು ಶಾಹಿ ಜಾಮಿಯಾ ಮಸೀದಿಯ ಮುಖಂಡರು, ಯುವಕರು ಹಾಗೂ ಮುದ್ದು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ





ಹಬ್ಬದ ಸಂಭ್ರಮವನ್ನು ಹಂಚಿಕೊಂಡರು. ಒಟ್ಟಿನಲ್ಲಿ, ಬಳಗಾನೂರಿನಲ್ಲಿ ರಂಜಾನ್ ಹಬ್ಬವು ಧಾರ್ಮಿಕ ಭಾವನೆಗಳ ಜೊತೆಗೆ ಸಾಮಾಜಿಕ ಐಕ್ಯತೆ, ಮಾನವೀಯತೆ ಮತ್ತು ಸಹೋದರತ್ವದ ಸಂದೇಶವನ್ನು ಸಾರಿದಂತಾಯಿತು. ಹಬ್ಬದ ಸಂದರ್ಭದಲ್ಲಿ ಎಲ್ಲ ಸಮುದಾಯದ ಜನರು ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು, ಶಾಂತಿ ಮತ್ತು ಸೌಹಾರ್ದತೆಯನ್ನು ಮತ್ತಷ್ಟು ಬಲಪಡಿಸಿದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101